ಸಂಪುಟ 01 । ಸಂಚಿಕೆ 228 ಶುಕ್ರವಾರ 23 ಅಕ್ಟೋಬರ್ 2026 । ಪುಟ 4 । ಬೆಲೆ–2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ಹಿಮ ಚಿರತೆಗಳ ಅಂತರರಾಷ್ಟ್ರೀಯ ದಿನ
International Day of the Snow Leopard
ಪ್ರತಿ ವರ್ಷ ಅಕ್ಟೋಬರ್ 23ರಂದು ಆಚರಿಸಲಾಗುತ್ತದೆ. ಹಿಮ ಚಿರತೆಗಳ ಸಂರಕ್ಷಣೆ ಮತ್ತು ಅವುಗಳ ಆವಾಸಸ್ಥಾನಗಳ ರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ.

2) ಕಿತ್ತೂರು ರಾಣಿ ಚೆನ್ನಮ್ಮ ಜನ್ಮ ಜಯಂತಿ Kittur Rani Chennamma Birth Anniversary: ಕರ್ನಾಟಕದ ಕಿತ್ತೂರಿನ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಜನ್ಮದಿನವನ್ನು ಸ್ಮರಿಸುವ ದಿನ. 1824ರಲ್ಲಿ ಬ್ರಿಟಿಷರ ಆಳ್ವಿಕೆಯ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದ ಭಾರತದ ಮೊದಲಿನ ಆಡಳಿತಗಾರರಲ್ಲಿ ಅವರು ಪ್ರಮುಖರಾಗಿದ್ದರು. ಬ್ರಿಟಿಷರ ವಿರುದ್ಧ ಧೈರ್ಯದಿಂದ ಹೋರಾಡಿದ ಅವರ ಶೌರ್ಯ, ಸಾಹಸ ಮತ್ತು ದೇಶಭಕ್ತಿಯನ್ನು ಈ ದಿನ ಸ್ಮರಿಸಲಾಗುತ್ತದೆ.

ಸುಭಾಷಿತ

ಜಾತಿಯ ಬಗ್ಗೆ ಕೇಳಬೇಡ, ಜಾತಿಯನ್ನು ಹೇಳಬೇಡ, ಜಾತಿಯ ಬಗ್ಗೆ ಚಿಂತಿಸಲೂ ಬೇಡ.
–ನಾರಾಯಣ ಗುರು

ಪ್ರಕಟಣೆ

ಆದಿಯೋಗಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಿಂಧನೂರು ತಾ॥ಸಿಂಧನೂರು ಜಿ ರಾಯಚೂರು ಇದರ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಗೆ ನಾಮಪತ್ರ ಸಲ್ಲಿಸಲು ಪ್ರಾರಂಭದಿನಾಂಕ:18–10–2026 ಹಾಗೂ ಕೊನೆಯ ದಿನಾಂಕ:25–10–2026, ನಾಮಪತ್ರ ಪರಿಶೀಲನೆ ದಿನಾಂಕ:26–10–2026ರಂದು ಹಾಗೂ ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನಾಂಕ:27–10–2026 ಆಗಿರುತ್ತದೆ. ಚುನಾವಣೆ ಅವಶ್ಯವಾದಲ್ಲಿ ದಿನಾಂಕ:02–11–2026 ರಂದು ಸಂಘದ ಕಛೇರಿಯಲ್ಲಿ ಚುನಾವಣೆ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಿ ಬಹುದಾಗಿದೆಯೆಂದು ತಿಳಿಸಿದೆ.

ಸ್ಥಳ: ಸಿಂಧನೂರು
2:17–10–2026

ಸಹಿ/–
(ಶಿವಪ್ಪ ಹಿ.ನಿ) ರಿಟರ್ನಿಂಗ್ ಅಧಿಕಾರಿಗಳುಆದಿಯೋಗಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಸಿಂಧನೂರು ತಾ॥ ಸಿಂಧನೂರು ಜಿ॥ ರಾಯಚೂರು

ಕರ್ನಾಟಕದ 226 ಬರಪೀಡಿತ ತಾಲೂಕುಗಳಲ್ಲಿ 62,481ಕೋಟಿ ನಷ್ಟ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕರ್ನಾಟಕದ 226 ಬರಪೀಡಿತ ತಾಲೂಕುಗಳಿಂದು ಒಟ್ಟು 62,481.88 ಕೋಟಿ ರೂಪಾಯಿ ನಷ್ಟವಾ ಗಿದ್ದು, ಎನ್ ಡಿ ಆರ್ ಎಫ್ ನಿಯ ಮಾವಳಿ ಅನುಸಾರ 20,585.73 ಕೋಟಿ ಬರ ಪರಿಹಾರ ನೆರವು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರದ ರಾಜ್ಯ ಸರ್ಕಾರ ಅಂತಿಮ ಪ್ರಸ್ತಾವನೆ ಸಲ್ಲಿಸಿದೆ.



ಕಂದಾಯ ಸಚಿವರು ಆಗಿರುವ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರಿಗೆ ಆರು ಪುಟಗಳ ಸುದೀರ್ಘ ಪತ್ರ ಬರೆದಿದ್ದು, ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ಒಟ್ಟಾಗಿ ರೈತರ ನೆರವಿಗೆ ಧಾವಿಸಬೇಕಿದೆ ಎಂದು ಹೇಳಿದ್ದಾರೆ.

ರಾಜ್ಯದ ರೈತ ಸಮುದಾಯ ಎದುರಿಸುತ್ತಿರುವ ಗಂಭೀರ ಬರ ಪರಿಸ್ಥಿತಿಯನ್ನು ವಿವರಿಸಿರುವ ಅವರು, ಬೆಳೆ ನಷ್ಟ, ಕುಡಿಯುವ ನೀರಿನ ಕೊರತೆ, ಜಾನುವಾರುಗಳ ರಕ್ಷಣೆ ಹಾಗೂ ಸಣ್ಣ ಮತ್ತು ಅತಿಸಣ್ಣ ರೈತ ಕುಟುಂಬಗಳಿಗೆ ತುರ್ತು ನೆರವು ಒದಗಿಸಲು ಕೇಂದ್ರ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

2026ರ ಮುಂಗಾರು ಹಂಗಾಮಿನಲ್ಲಿ ಕರ್ನಾಟಕವು ತೀವ್ರ ಮಳೆ ಕೊರತೆಯನ್ನು ಎದುರಿಸಿದೆ. ರಾಜ್ಯದಲ್ಲಿ ವಾಡಿಕೆಯಂತೆ 852 ಮಿಲಿಮೀಟರ್ ಮಳೆಯಾಗಬೇಕಿದ್ದರೂ, ಕೇವಲ 551 ಮಿಲಿಮೀಟರ್ ಮಳೆಯಾಗಿದೆ. ಇದರಿಂದ ಶೇ. 35ರಷ್ಟು ಮಳೆ ಕೊರತೆ ದಾಖಲಾಗಿದ್ದು, 1956ರ ನಂತರದ ಎರಡನೇ ಅತ್ಯಂತ ಕಡಿಮೆ ಮುಂಗಾರು ಮಳೆಯಾಗಿದೆ. ಮುಂಗಾರಿನ 122 ದಿನಗಳಲ್ಲಿ 79 ದಿನ ಮಳೆ ಕೊರತೆ ಅಥವಾ ತೀವ್ರ ಮಳೆ ಕೊರತೆ ಕಂಡುಬಂದಿದೆ.

ಕೇಂದ್ರದ ಅಂತರ್ ಸಚಿವಾಲಯ ತಂಡವು ಅಕ್ಟೋಬರ್ 3ರಿಂದ 6ರವರೆಗೆ ರಾಜ್ಯದ ಬರ ಪರಿಸ್ಥಿತಿಯನ್ನು ಪರಿಶೀಲಿಸಿದೆ. ಈ ಹಿಂದೆ ಅಕ್ಟೋಬರ್ 1ರಂದು 177 ಬರಪೀಡಿತ ತಾಲೂಕುಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ನೆರವು ಕೋರಿ ರಾಜ್ಯ ಸರ್ಕಾರ ಮನವಿ ಸಲ್ಲಿಸಿತ್ತು. ನಂತರದ ಪರಿಶೀಲನೆಯ ಆದಾರದಲ್ಲಿ ಹೆಚ್ಚುವರಿಯಾಗಿ 49 ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದ್ದು, ಒಟ್ಟು ತಾಲೂಕುಗಳ ಸಂಖ್ಯೆ 226ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಒಟ್ಟು 57.93 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಇದರಲ್ಲಿ 53.92 ಲಕ್ಷ ಹೆಕ್ಟೇರ್ ಕೃಷಿ ಬೆಳೆಗಳು ಹಾಗೂ 4.01 ಲಕ್ಷ ಹೆಕ್ಟೇರ್ ತೋಟಗಾರಿಕಾ ಬೆಳೆಗಳು ಸೇರಿವೆ. ಬೆಳೆ ಹಾನಿಯ ಪ್ರಮಾಣ ಶೇ. 33ರಿಂದ ಶೇ. 100ರವರೆಗೆ ಇದೆ. ಮೆಕ್ಕೆಜೋಳ, ತೊಗರಿ, ಹತ್ತಿ, ರಾಗಿ, ಕಬ್ಬು, ಹೆಸರು, ಸೋಯಾಬೀನ್ ಮತ್ತು ಭತ್ತ ಪ್ರಮುಖವಾಗಿ ಹಾನಿಗೊಳಗಾಗಿವೆ. ಈ ಬೆಳೆ ನಷ್ಟದಿಂದ ಕೃಷಿ ಕುಟುಂಬಗಳ ಆದಾಯ, ಆರ್ಥಿಕ ಭದ್ರತೆ ಹಾಗೂ ಮುಂದಿನ ಬಿತ್ತನೆಗೆ ಅಗತ್ಯವಾದ ಬಂಡವಾಳದ ಮೇಲೆ ಗಂಭೀರ ಪರಿಣಾಮ ಬೀರಿದೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಬೆಳೆ ಹಾನಿ, ಕುಡಿಯುವ ನೀರು, ಪಶುಸಂಗೋಪನೆ ಮತ್ತು ಸಣ್ಣ ಹಾಗೂ ಅತಿಸಣ್ಣ ರೈತರಿಗೆ ತಕ್ಷಣದ ನೆರವು ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಒಟ್ಟು 20,585.73 ಕೋಟಿ ರೂ. ಗಳ ನೆರವು ನೀಡಬೇಕೆಂದು ಮನವಿ ಮಾಡಿದ್ದಾರೆ. ಈ ಪೈಕಿ ಬೆಳೆ ನಷ್ಟದ ಇನ್ ಪುಟ್ ಸಬ್ಸಿಡಿಗಾಗಿ 6,128.70 ಕೋಟಿ, ಕುಡಿಯುವ ನೀರು ಪೂರೈಕೆಗಾಗಿ 1,727 ಕೋಟಿ, ಪಶುಸಂಗೋಪನೆ ಮತ್ತು ಜಾನುವಾರು ರಕ್ಷಣೆಗಾಗಿ 583.04 ಕೋಟಿ ಹಾಗೂ 61.91 ಲಕ್ಷ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತುರ್ತು ಪರಿಹಾರವಾಗಿ 12,146.99 ಕೋಟಿ ಬಿಡುಗಡೆ ಮಾಡುವಂತೆ ಮನವಿ ಮಾಡಲಾಗಿದೆ.

ಸಣ್ಣ ಮತ್ತು ಅತಿಸಣ್ಣ ರೈತರಿಗೆ ದಿನಕ್ಕೆ 327ರಂತೆ 60 ದಿನಗಳ ಅವಧಿಗೆ ನೆರವು ಲೆಕ್ಕಹಾಕಲಾಗಿದೆ. ಈ ನೆರವು ರೈತ ಕುಟುಂಬಗಳ ಮೂಲಭೂತ ಅಗತ್ಯಗಳನ್ನು ಪೂರೈಸಲು ಹಾಗೂ ಬೆಳೆ ನಷ್ಟದಿಂದ ಉಂಟಾಗಿರುವ ಆರ್ಥಿಕ ಸಂಕಷ್ಟವನ್ನು ಎದುರಿಸಲು ಅತ್ಯಗತ್ಯವಾಗಿದೆ ಎಂದು ಉಪಮುಖ್ಯಮಂತ್ರಿ ತಿಳಿಸಿದ್ದಾರೆ.

ಕುಡಿಯುವ ನೀರಿನ ವ್ಯವಸ್ಥೆ ಸುಧಾರಣೆ ಮತ್ತು ನೀರು ಪೂರೈಕೆ ಯೋಜನೆಗಳ ದುರಸ್ತಿಗಾಗಿ 1,727 ಕೋಟಿ ಕೋರಲಾಗಿದೆ. ಇದರಲ್ಲಿ ಗ್ರಾಮೀಣ ಪ್ರದೇಶಗಳಿಗೆ 1,130 ಕೋಟಿ ಹಾಗೂ ನಗರ ಪ್ರದೇಶಗಳಿಗೆ 597 ಕೋಟಿ ಸೇರಿವೆ. ಜಾನುವಾರುಗಳ ರಕ್ಷಣೆಗಾಗಿ 476 ಗೋಶಾಲೆಗಳು ಮತ್ತು 583 ಮೇವು ಬ್ಯಾಂಕ್ ಗಳನ್ನು ಸ್ಥಾಪಿಸುವುದು ಸೇರಿದಂತೆ ಅಗತ್ಯ ಕ್ರಮಗಳಿಗೆ ಅನುದಾನ ನೀಡುವಂತೆ ಮನವಿ ಮಾಡಲಾಗಿದೆ.

ರೈತರಿಗೆ ಪರಿಹಾರ ಲೆಕ್ಕಾಚಾರ ಮಾಡುವ ಪ್ರಸ್ತುತ ವ್ಯವಸ್ಥೆಯಲ್ಲಿರುವ ಸಮಸ್ಯೆಯನ್ನೂ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಕೃಷಿ ಗಣತಿಯ ಹೊಸ ಅಂಕಿಅಂಶಗಳು ಲಭ್ಯವಿಲ್ಲದ ಹಿನ್ನೆಲೆಯಲ್ಲಿ 2015–16ರ ಕೃಷಿ ಗಣತಿಯನ್ನೇ ಆಧಾರವಾಗಿ ಬಳಸಲಾಗುತ್ತಿದೆ. ಇದರಿಂದ ಅರ್ಹ ರೈತರಿಗೆ ನೀಡಬೇಕಾದ ಪರಿಹಾರದ ಲೆಕ್ಕಾಚಾರದಲ್ಲಿ ಸುಮಾರು 1,669.50 ಕೋಟಿ ಕೊರತೆಯಾಗುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತ ಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ರೈತರ ವಿವರಗಳನ್ನು ಒಳಗೊಂಡಿರುವ ಎಫ್ ಆರ್ ಯು ಐ ಟಿ ಎಸ್ ದತ್ತಾಂಶ ವ್ಯವಸ್ಥೆಯನ್ನು ಬಳಸಿಕೊಂಡು ಫಲಾನುಭವಿಗಳ ಅರ್ಹತೆ ಮತ್ತು ಬೆಳೆ ಪರಿಹಾರದ ಮೊತ್ತವನ್ನು ನಿರ್ಧರಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಬರದಿಂದ ಮಕ್ಕಳ ಪೌಷ್ಟಿಕಾಂಶ, ಶಿಕ್ಷಣ ಮತ್ತು ದುರ್ಬಲ ಕುಟುಂಬಗಳ ಜೀವನೋಪಾಯದ ಮೇಲೂ ಪರಿಣಾಮ ಉಂಟಾಗುವುದರಿಂದ, ಬರಪೀಡಿತ ತಾಲೂಕುಗಳ ಶಾಲಾ ಮಕ್ಕಳಿಗೆ ಬೇಸಿಗೆ ರಜೆಯಲ್ಲಿಯೂ ಪೌಷ್ಟಿಕ ಆಹಾರ ಒದಗಿಸಲು ಪಿಎಂ ಪೋಷಣ್ ಯೋಜನೆಯಡಿ ಹೆಚ್ಚುವರಿಯಾಗಿ 427.20 ಕೋಟಿ ರೂ. ಹಾಗೂ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ 70.96 ಕೋಟಿ ರೂ. ಬಿಡುಗಡೆ ಮಾಡುವಂತೆ ಮನವಿ ಮಾಡಲಾಗಿದೆ.

ಕೃಷಿ ವೆಚ್ಚ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ನೀಡುವ ಪರಿಹಾರದ ಪ್ರಸ್ತುತ ಮಾನದಂಡಗಳನ್ನು 16ನೇ ಹಣಕಾಸು ಆಯೋಗದ ಅವಧಿಗೆ ಅನುಗುಣವಾಗಿ ಪರಿಷ್ಕರಿಸಬೇಕು ಎಂದೂ ಪತ್ರದಲ್ಲಿ ಒತ್ತಾಯಿಸಲಾಗಿದೆ.ಕರ್ನಾಟಕದ ರೈತರು ದೇಶದ ಆಹಾರ ಭದ್ರತೆ ಮತ್ತು ಕೃಷಿ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರ ಒಕ್ಕೂಟ ವ್ಯವಸ್ಥೆಯ ಆಶಯದಡಿ ಒಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ಉಪಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

ಪ್ರಧಾನಮಂತ್ರಿಗಳು ವೈಯಕ್ತಿಕವಾಗಿ ಮಧ್ಯಪ್ರವೇಶಿಸಿ ಬರ ಪರಿಹಾರ ಮನವಿಯ ಪರಿಶೀಲನೆಯನ್ನು ತ್ವರಿತಗೊಳಿಸಬೇಕು, ಕೇಂದ್ರದ ಅಂತರ್ ಸಚಿವಾಲಯ ತಂಡದ ಶಿಫಾರಸುಗಳನ್ನು ಉನ್ನತ ಮಟ್ಟದ ಸಮಿತಿಗೆ ಶೀಘ್ರ ಸಲ್ಲಿಸುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಅಗತ್ಯ ಅನುದಾನವನ್ನು ಆದಷ್ಟು ಬೇಗ ಮಂಜೂರು ಮಾಡಿ ಬಿಡುಗಡೆ ಮಾಡಬೇಕು ಎಂದು ಡಾ. ಜಿ. ಪರಮೇಶ್ವರ್ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಂಘಟನೆ ಬಲವರ್ಧನೆ ಮತ್ತು ಹಲವು ಸಮಸ್ಯೆಗಳ ಚರ್ಚೆಗೆ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಭೆ

❏ ನೈಜ್ಯ ದೆಸೆ ನ್ಯೂಸ್

ಬೀದರ್: ಪತ್ರಿಕೆಗಳ ಹಲವಾರು ಸಮಸ್ಯೆಗಳ ಕುರಿತು ಚರ್ಚೆ ಮಾಡಲು ಹಾಗೂ ಪತ್ರಿಕಾ ಸಂಘಟನೆ ಬಲವರ್ಧನೆಗೆ ಎಂದು ಶ್ರೀಯುತ ಬಾಬು ವಾಲಿ ಅವರ ಮನೆಯಲ್ಲಿ ಸಂಪಾದಕರ ಸಭೆ ನಡೆಯಿತು. ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಜಿಲ್ಲಾ ಘಟಕ ಬೀದರ್ ವತಿಯಿಂದ ಈ ಸಭೆ ಕರೆಯಲಾಗಿತ್ತು.



ಸಭೆಯಲ್ಲಿ ಭಾಗವಹಿಸಿದ ಸಂಪಾದಕರುಗಳು ತಮ್ಮ ತಮ್ಮ ಅನಿಸಿಕೆ ಪತ್ರಿಕೆಗಳ ಸ್ಥಿತಿಗತಿ ಕುರಿತು ಚರ್ಚೆ ಮಾಡಿದರು. ಪ್ರಾದೇಶಿಕ ಪತ್ರಿಕೆಗಳ ಸಂಪಾದಕ ಸಂಘದ ಅಧ್ಯಕ್ಷರಾಗಿರುವ ಬಾಬು ವಾಲಿ ಅವರು ಮಾತನಾಡಿ ಪತ್ರಿಕೆಗಳ ಹಿತಕ್ಕಾಗಿ ಸರ್ಕಾರದ ಮತ್ತು ಪತ್ರಕರ್ತರ ನಡುವೆ ಒಳ್ಳೆ ಸಮನ್ವಯ ಇರಬೇಕು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳಿದರು. ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಹಲವಾರು ಸಭೆಗಳ ಸ್ಥಿತಿಗತಿ ಕುರಿತು ಇಲ್ಲಿ ನಡೆದ ವಿಚಾರಗಳನ್ನು ಕಾರ್ಯನಿರತ ದಿನಪತ್ರಿಕೆ ಸಂಪಾದಕರ ಸಂಘದ ಅಧ್ಯಕ್ಷ ವಿಜಯ್ ಕುಮಾರ್ ಪಾಟೀಲ್ ಸಭೆಯ ಗಮನಕ್ಕೆ ತಂದರು. ಏನೇ ಆದರೂ ಅವೈಜ್ಞಾನಿಕವಾಗಿರಬಾರದು ಎಲ್ಲವೂ ಅಚ್ಚುಕಟ್ಟಾಗಿ ಜ್ಞಾನವರ್ಧಕ ನೀತಿಗಳು ಇರಬೇಕೆಂದು ಹಿರಿಯ ಸಂಪಾದಕ ಮಾಳಪ್ಪ ಅಡಸಾರೆ ಸಭೆಗೆ ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ ಹಿರಿಯ ಸಂಪಾದಕರುಗಳಾದ ಅಲಿಬಾಬಾ ಮತ್ತು ಸೈಯದ್ ಹಸನ್ ಖಾದ್ರಿ, ದೀಪಕ ವಾಲಿ, ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಪಾಟೀಲ್, ಸಿದ್ದರಾಮಯ್ಯ ಸ್ವಾಮಿ,ಗಣಪತಿ ಡಿಕೆ. ಶ್ರೀನಿವಾಸ್ ಚೌಧರಿ, ಅಜಯ್ ಭೋಸ್ಲೆ, ಅಬ್ದುಲ್ ಖದೀರ್, ಮಹ್ಮದ್ ಅಬ್ದುಲ್ ಅಲಿ, ರವಿ ಸ್ವಾಮಿ, ಜೈ ಕುಮಾರ್, ಕೀರ್ತಿ ಸೇನಾ ಅನೇಕ ಹಿರಿಯ, ಕಿರಿಯ ಸಂಪಾದಕರು ಸಲಹೆ ಸೂಚನೆಗಳನ್ನು ನೀಡಿದರು.

ಅಬಕಾರಿ ಇನ್ಸ್ಪೆಕ್ಟರ್ ಲಕ್ಷ್ಮೀದೇವಿ ಕಾರ್ಯಾಚರಣೆ 35.82 ಲೀಟರ್ ಮದ್ಯ ವಶ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ–2026 ರ ಮತದಾನದ ಪ್ರಯುಕ್ತ ರಾಯಚೂರು ಜಿಲ್ಲೆಯಾದ್ಯಂತ ದಿನಾಂಕ: 21–10–2026 ರಂದು ಸಾಯಂಕಾಲ 4–00 ಗಂಟೆಯಿಂದ ದಿನಾಂಕ: 23–10–2026 ರಂದು ಮಧ್ಯರಾತ್ರಿ 12–00 ಗಂಟೆಯವರೆಗೆ ಮದ್ಯ ಮಾರಾಟ ಹಾಗೂ ಮದ್ಯ ಸಾಗಾಣಿಕೆಯನ್ನು ನಿಷೇದಿಸಿ ಆದೇಶಿಸಿದ ಪ್ರಯುಕ್ತ ಲಕ್ಷ್ಮೀದೇವಿ ಅಬಕಾರಿ ನಿರೀಕ್ಷಕರು



ಲಿಂಗಸಗೂರು ವಲಯ ರವರ ನೇತೃತ್ವದಲ್ಲಿ ಪಟ್ಟಣದಲ್ಲಿ ಗಸ್ತು ಮಾಡುತ್ತಿರುವಾಗ ಬಂದ ಖಚಿತ ಮಾಹಿತಿಯ ಮೇರೆಗೆ ಲಿಂಗಸಗೂರು ಪಟ್ಟಣದ ಕಲಬುರ್ಗಿ ಮುಖ್ಯ ರಸ್ತೆಯ ಬಸವಸಾಗರ ಕ್ರಾಸ್ ಹತ್ತಿರವಿರುವ ಕೃಷ್ಣಪ್ಪ ತಂದೆ ಶೆಟ್ಟಪ್ಪ ರಾಠೋಡ ಸಾ: ಗೋನವಾಟ್ಲ ತಾಂಡಾ ಈತನ ಕೃಷ್ಣ ಸ್ಪೆಷಲ್ ಚಿಕನ್ ಮತ್ತು ಮಟನ್ ಖಾನಾವಳಿ ಮೇಲೆ ಅಬಕಾರಿ ಇನ್ಸ್ಪೆಕ್ಟರ್ ದಾಳಿ ಮಾಡಿ ಶೋಧನೆ ಮಾಡಿದಾಗ 1) ಬ್ಯಾಗ್ ಪೈಪರ್ ವಿಸ್ಕಿಯ 180 ಎಂಎಲ್ ನ 81 ಟೆಟ್ರಾ ಪ್ಯಾಕೆಟ್, 2) ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 90 ಎಂ.ಎಲ್ ನ 96 ಟೆಟ್ರಾ ಪ್ಯಾಕೆಟ್ ಗಳು, 3) ಬ್ಯಾಗ್ ಪೈಪರ್ ವಿಸ್ಕಿಯ 90 ಎಂ.ಎಲ್ ನ 59 ಟೆಟ್ರಾ ಪ್ಯಾಕ್ 4) ಒರಿಜಿನಲ್ ಚಾಯ್ಸ್ ವಿಸ್ಕಿಯ 90 ಎಂಎಲ್ ನ 81 ಟೆಟ್ರಾ ಪ್ಯಾಕ್ ಒಟ್ಟು 35.82 ಲೀಟರ್ ಭಾರತೀಯ ತಯಾರಿಕ ಮದ್ಯವನ್ನು ಸಂಗ್ರಹಿಸಿಟ್ಟಿರುವುದನ್ನು ಪತ್ತೆಹಚ್ಚಿ ಆರೋಪಿಯನ್ನು ಬಂಧಿಸಿ, ಃಓಖಖ ಕಾಯ್ದೆ–2023 ರ ಕಲಂ 35(3) ರ ಪ್ರಕಾರ ನೋಟೀಸ್ ನೀಡಿ, ಸದರಿ ಆರೋಪಿತನ ವಿರುದ್ದ ಪ್ರಕರಣವನ್ನು ದಾಖಲಿಸಿದರು . ಇದೇರೀತಿ ಪಟ್ಟಣದ ಕೆಲವು ಕಡೆಗಳಲ್ಲಿ ದಾಳಿ ನಡೆಸಲಾಗಿದೆ. ಇವರ ಈ ಕಾರ್ಯಕ್ಕೆ ಸಾರ್ವಜನಿಕರು ಸ್ಲಾಘಿಸಿದ್ದಾರೆ ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ಬಸವರಾಜ ಅಬಕಾರಿ ಉಪ ನಿರೀಕ್ಷಕರು–1, ಶರಣಬಸಪ್ಪ ಅಬಕಾರಿ ಉಪ ನಿರೀಕ್ಷಕರು–2, ಅಮರೇಶ ವಾಹನ ಚಾಲಕ ಹಾಗೂ ಗೃಹ ರಕ್ಷಕ ಸಿಬ್ಬಂದಿಗಳು ಇದ್ದರು.

ಕಲ್ಮಠದ ದಸರಾ ಸರ್ವಧರ್ಮ ಸಮ್ಮೇಳನದಲ್ಲಿ ಸೌಹಾರ್ದತೆಯ ಸಂದೇಶ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: 'ಧರ್ಮಗಳ ಹೆಸರಿನಲ್ಲಿ ಜಗಳವಾಡಬೇಡಿ, ಸೌಹಾರ್ದತೆಯಿಂದ ಬಾಳಿರಿ' ಸೈಯಾದ್ ಸಜ್ಜದ್ ಹುಸೇನ್ ಮತವಾಲೆ ಬದಲಾವಣೆಸುದ್ದಿ ಮಾನ್ವಿ: ಪಟ್ಟಣದ ಕಲ್ಮಠದಲ್ಲಿ ನಡೆಯುತ್ತಿರುವ 51ನೇ ವರ್ಷದ ದಸರಾ ಮಹೋತ್ಸವದ ಅಂಗವಾಗಿ ಶ್ರೀದೇವಿ ಪುರಾಣ ಮಹೋತ್ಸವದ ನಿಮಿತ್ತ ಆಯೋಜಿಸಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಮುಸ್ಲಿಂ ಧರ್ಮಗುರು ಸೈಯಾದ್ ಸಜ್ಜದ್ ಹುಸೇನ್ ಮತವಾಲೆ ಅವರು ಸಂಸ್ಕೃತದಲ್ಲಿ ಸಂದೇಶ ಸಾರುವ ಮೂಲಕ ಗಮನ ಸೆಳೆದರು.



ದಸರಾ ಹಬ್ಬವು ದುಷ್ಟಶಕ್ತಿಗಳ ಮೇಲಿನ ಒಳಿತಿನ ವಿಜಯದ ಸಂಕೇತವಾಗಿದೆ. ಪ್ರತಿಯೊಬ್ಬರೂ ತಮ್ಮಲ್ಲಿರುವ ದುಷ್ಟ ಚಟಗಳನ್ನು ಹಾಗೂ ಕೆಟ್ಟ ಕೆಲಸಗಳನ್ನು ತೊರೆದು, ಸಮಾಜದಲ್ಲಿ ಸೌಹಾರ್ದತೆಯಿಂದ ಬದುಕಬೇಕು. ಕೋಮು ಸೌಹಾರ್ದತೆಗೆ ಧಕ್ಕೆ ತರುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಎಲ್ಲ ಸಮುದಾಯದವರು ಪರಸ್ಪರರ ಹಬ್ಬಗಳನ್ನು ಒಗ್ಗಟ್ಟಿನಿಂದ ಆಚರಿಸಬೇಕು ಎಂದು ಕರೆ ನೀಡಿದರು.

ಲಿಂಗೈಕ್ಯ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ದಸರಾ ಮಹೋತ್ಸವವನ್ನು ಪ್ರಾರಂಭಿಸಿ, ಎಲ್ಲ ಧರ್ಮಗಳ ಧರ್ಮಗುರುಗಳನ್ನು ಒಂದೇ ವೇದಿಕೆಗೆ ಕರೆತರುವ ಮೂಲಕ ಹಬ್ಬವನ್ನು ಯಾವುದೇ ಒಂದು ಜಾತಿ ಅಥವಾ ಸಮುದಾಯಕ್ಕೆ ಸೀಮಿತಗೊಳಿಸದೆ ಸರ್ವಧರ್ಮಗಳ ಸೌಹಾರ್ದದ ಹಬ್ಬವನ್ನಾಗಿ ರೂಪಿಸಿದರು. ಶ್ರೀಮಠವು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಯಾವುದೇ ಭೇದಭಾವವಿಲ್ಲದೆ ಮಹೋತ್ಸವವನ್ನು ಆಚರಿಸಬೇಕು ಎಂದರು.

ಯಾವ ಮುಸ್ಲಿಂ ಕುರಾನ್‌ನ ಸಂದೇಶವನ್ನು ಸರಿಯಾಗಿ ಅರಿತುಕೊಳ್ಳುತ್ತಾನೋ, ಯಾವ ಹಿಂದೂ ಶ್ರೀರಾಮನ ಸಂದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಾನೋ ಅವರು ಸಮಾಜದಲ್ಲಿ ಭೇದಭಾವವಿಲ್ಲದೆ ಸೌಹಾರ್ದತೆಯಿಂದ ಬದುಕುತ್ತಾರೆ. ಶ್ರೀರಾಮ ಮತ್ತು ಅಲ್ಲಾಹ್ ಕೆಟ್ಟದ್ದನ್ನು ಬೋಧಿಸಿಲ್ಲ. ಮಸೀದಿ, ದೇವಸ್ಥಾನ ಹಾಗೂ ಚರ್ಚ್‌ಗಳು ಯಾವುದೇ ಒಂದು ಜಾತಿಗೆ ಸೀಮಿತವಾಗಿಲ್ಲ; ಅವು ಎಲ್ಲರಿಗೂ ಸೇರಿವೆ. ಸೂಫಿ ಸಂತರು, ಪ್ರವಾದಿ ಮಹಮ್ಮದ್ ಹಾಗೂ ಶ್ರೀರಾಮರ ಸಂದೇಶದಂತೆ ಬದುಕಬೇಕೇ ಹೊರತು ಅವರ ಹೆಸರಿನಲ್ಲಿ ಜಗಳವಾಡಬಾರದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಲ್ಲೂರಿನ ಕ್ರೈಸ್ತ ಧರ್ಮಗುರು ಫಾ. ಸುಂದರಾಜ್ ಹಾಗೂ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಧರ್ಮ ಸಂದೇಶ ನೀಡಿದರು. ಶ್ರೀ ಅನ್ನದಾನ ಸ್ವಾಮಿಗಳು ಶ್ರೀದೇವಿ ಪುರಾಣ ಪ್ರವಚನ ನೀಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಾಹಿತ್ಯ ಸಿಂಚನ

ವಿಧಿಯ ತಿರುವಿನಲ್ಲಿ

ವಿಧಿಯ ತಿರುವಿನಲ್ಲಿ ಹೆಜ್ಜೆಯಿಟ್ಟಾಗ,
ಹೊಸ ಕನಸುಗಳು ಕಣ್ಣ ಮುಂದೆ ಮೂಡಿದಾಗ.
ಕಾಲದ ಆಟದಲ್ಲಿ ದಾರಿಗಳು ಬದಲಾದವು,
ಮನದ ಆಸೆಗಳು ಮೌನವಾಗಿ ಉಳಿದವು.

ನಂಬಿಕೆಯ ದೀಪವು ಗಾಳಿಗೆ ನಡುಗಿತು,
ಕನಸಿನ ಹಾದಿಯಲಿ ಕತ್ತಲು ಕವಿಯಿತು.
ಬಯಸಿದ ಬದುಕು ಕೈಜಾರಿ ಹೋದರೂ,
ಹೊಸ ಭರವಸೆಯೊಂದು ಮನದಲ್ಲಿ ಮೂಡಿತು.

ವಿಧಿಯು ಬರೆದ ಕಥೆ ಅರಿಯದ ಮನಕೆ,
ಕಣ್ಣೀರ ಹನಿಗಳೇ ಉತ್ತರವಾದವು.
ಸೋಲುಗಳ ನಡುವೆಯೂ ನಗುವನು ಹುಡುಕಿ,
ಹೃದಯದ ನೋವಿಗೆ ಧೈರ್ಯವೇ ಮದ್ದಾಯಿತು.

ತಿರುವುಗಳ ದಾರಿಯಲ್ಲಿ ಒಂಟಿಯಾಗಿ ನಡೆದರೂ,
ನೆನಪುಗಳ ನೆರಳಲ್ಲಿ ಬದುಕನ್ನು ಕಂಡೆನು.
ಕಳೆದುಹೋದ ಕ್ಷಣಗಳ ಪಾಠವನು ಕಲಿತು,
ಹೊಸ ಬೆಳಕಿನ ಕಡೆಗೆ ಹೆಜ್ಜೆಯನು ಇಟ್ಟೆನು.

ವಿಧಿಯ ತಿರುವುಗಳು ದಾರಿಯ ಅಂತ್ಯವಲ್ಲ,
ಬದುಕಿನ ಹೊಸ ಅಧ್ಯಾಯದ ಆರಂಭವಷ್ಟೇ.
ಕಾಲವು ಬದಲಾದರೂ ಕನಸು ಬದಲಾಗದಿರಲಿ,
ನಂಬಿಕೆಯ ಬೆಳಕಿನಲ್ಲಿ ನಾಳೆ ಸುಂದರವಾಗಲಿ

ವಿಶ್ವ ಅಯೋಡಿನ್ ದಿನಾಚರಣೆ: ಸಾರ್ವಜನಿಕರಲ್ಲಿ ಅಯೋಡಿನ್ ಕೊರತೆಯ ಬಗ್ಗೆ ಆರೋಗ್ಯ ಜಾಗೃತಿ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಹಾಗೂ ಸನ್ ರೈಸ್ ನರ್ಸಿಂಗ್ ಕಾಲೇಜು ಸಿಂಧನೂರು ವಿದ್ಯಾರ್ಥಿಗಳ ಸಂಯುಕ್ತ ಆಶ್ರಯದಲ್ಲಿ ಜವಳಗೇರಾದ ಅಮೃತ ನಗರದ ಸಮುದಾಯ ಭವನದಲ್ಲಿ ವಿಶ್ವ ಅಯೋಡಿನ್ ದಿನಾಚರಣೆಯ ಅಂಗವಾಗಿ ಜನಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಮಾತನಾಡಿ ಸಾರ್ವಜನಿಕರಲ್ಲಿ ಅಯೋಡಿನ್‌ನ ಮಹತ್ವ ಹಾಗೂ ಅಯೋಡಿನ್ ಕೊರತೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳ ಕುರಿತು ಜನಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಅಯೋಡಿನ್ ಮಾನವನ ದೇಹದ ಬೆಳವಣಿಗೆಗೆ ಅತ್ಯಗತ್ಯವಾದ ಸೂಕ್ಷ್ಮ



ಪೋಷಕಾಂಶವಾಗಿದ್ದು, ಥೈರಾಯ್ಡ್ ಗ್ರಂಥಿಯ ಸರಿಯಾದ ಕಾರ್ಯನಿರ್ವಹಣೆಗೆ ಸಹಕಾರಿಯಾಗಿದೆ ಎಂದು ತಿಳಿಸಲಾಯಿತು. ವಿಶೇಷವಾಗಿ ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಅಯೋಡಿನ್ ಪ್ರಮುಖ ಪಾತ್ರ ವಹಿಸುತ್ತದೆ ಎಂದು ವಿವರಿಸಲಾಯಿತು.

ಅಯೋಡಿನ್ ಕೊರತೆಯಿಂದ ಕಂಠಮಾಲೆ (ಗಾಯಿಟರ್), ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತತೆ ಹಾಗೂ ಬೌದ್ಧಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ಸಾರ್ವಜನಿಕರು ಪ್ರತಿದಿನ ಅಯೋಡಿನ್ ಯುಕ್ತ ಉಪ್ಪನ್ನು ಬಳಸಬೇಕು. ಉಪ್ಪನ್ನು ತೇವಾಂಶವಿಲ್ಲದ, ಮುಚ್ಚಿದ ಪಾತ್ರೆಯಲ್ಲಿ ಸಂಗ್ರಹಿಸಬೇಕು ಹಾಗೂ ಅಡುಗೆಯಲ್ಲಿ ಉಪ್ಪನ್ನು ಸೂಕ್ತ ಸಮಯದಲ್ಲಿ ಬಳಸುವ ಮೂಲಕ ಅಯೋಡಿನ್ ನಷ್ಟವನ್ನು ಕಡಿಮೆ ಮಾಡಬೇಕು ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ ಎಂದು ಆರೋಗ್ಯ ಶಿಕ್ಷಣ ನೀಡಲಾಯಿತು ನಂತರ ಮಾತನಾಡಿದ ಸನ್ ರೈಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಲೇಜರ್ ಸೈರಲ್ ಅವರು ಮಾತನಾಡಿ ಅಯೋಡಿನ್ ಕೊರತೆಯನ್ನು ತಡೆಗಟ್ಟುವಲ್ಲಿ ಸಾರ್ವಜನಿಕರ ಸಹಕಾರ ಅತ್ಯಂತ ಮುಖ್ಯವಾಗಿದ್ದು, ಪ್ರತಿಯೊಂದು ಕುಟುಂಬವೂ ಅಯೋಡಿನ್ ಯುಕ್ತ ಉಪ್ಪಿನ ಬಳಕೆಗೆ ಆದ್ಯತೆ ನೀಡಬೇಕು ಎಂದು ಮನವಿ ಮಾಡಲಾಯಿತು.

"ಅಯೋಡಿನ್ ಯುಕ್ತ ಉಪ್ಪಿನ ಬಳಕೆ ? ಆರೋಗ್ಯಕರ ಜೀವನಕ್ಕೆ ಅಡಿಪಾಯ" ಎಂಬ ಸಂದೇಶದೊಂದಿಗೆ ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಸಾರ್ವಜನಿಕರು ತಾಯಿಂದಿರು ಸನ್ ರೈಸ್ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು

ನಾಡ ದೇವಿ ತಾಯಿ ಚಾಮುಂಡೇಶ್ವರಿ ದೇವಿಯ ಸಹೋದರಿ ಬನ್ನಿ ಕಾಳಮ್ಮ ತಾಯಿಯ ದೇವಾಲಯ ಅಭಿವೃದ್ಧಿಗೆ ಸಹಕಾರ ನೀಡಿ ಭಕ್ತರ ಕೋರಿಕೆ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಅಕ್ಟೋಬರ್ 22 ತಾಯಿ ನಾಡದೇವಿ ಚಾಮುಂಡೇಶ್ವರಿ ದೇವಿಯ ಸಹೋದರಿ ಬನ್ನಿ ಕಾಳಮ್ಮ ತಾಯಿಯ ದೇವಾಲಯ ಅಭಿವೃದ್ಧಿಗೆ ಸಹಕಾರ ನೀಡಿ ನೀಡುವಂತೆ ಮೈಸೂರು ಜಿಲ್ಲೆಯ ಸುಮಾರು 20ಕ್ಕೂ ಹೆಚ್ಚು ಗ್ರಾಮಗಳ ದೇವಿಯ ಭಕ್ತರು ಕೋರಿದ್ದಾರೆ ಮೈಸೂರು ತಾಲೂಕು,

ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಸಕಳ್ಳಿ ಗ್ರಾಮದ ಬಳಿ ತಾಯಿ ಚಾಮುಂಡೇಶ್ವರಿಯ ಬೆಟ್ಟದ ಪಕ್ಕದಲ್ಲಿ ನೆಲೆಸಿರುವ ಸಾವಿರಾರು ವರ್ಷಗಳ ಇತಿಹಾಸ ಪ್ರಸಿದ್ಧಿ ಉಳ್ಳ ತಾಯಿ ಬನ್ನಿ ಕಾಳಮ್ಮನವರ ದೇವಾಲಯ ದೇವಿಯ ಭಕ್ತರು ಚಿಕ್ಕದಾಗಿ ದೇವಾಲಯವನ್ನು ನಿರ್ಮಾಣ ಮಾಡಿದ್ದಾರೆ ಆದರೆ ದೇವಾಲಯದ ಅಭಿವೃದ್ಧಿಗೆ ನಿವೇಶನ ಭೂಮಿ ನೀಡುವ ಜೊತೆಗೆ ದೇವಾಲಯದಲ್ಲಿ ವಿದ್ಯುತ್ ದೀಪ ಇಲ್ಲದೆ ದೇವಾಲಯ ಕತ್ತಲಿನಿಂದ ಕೂಡಿದ್ದು ದೇವಾಲಯಕ್ಕೆ ವಿದ್ಯುತ್ ಅಳವಡಿಸಲು ದೇವಾಲಯಕ್ಕೆ



ಬೆಳಕು ನೀಡಲು ಸಂಬಂಧ ಪಟ್ಟವರು ಸಹಕಾರ ನೀಡುವಂತೆ ದೇವಾಲಯದ ಭಕ್ತರು ಮಾಧ್ಯಮಗಳ ಮೂಲಕ ತಮ್ಮ ಕೋರಿಕೆಯನ್ನು ಹಾಗು ಬೇಡಿಕೆಯನ್ನು ಮುಂದಿಟ್ಟಿದ್ದಾರೆ ಪ್ರತಿವರ್ಷ ಆಯ್ದು ಪೂಜೆ ವಿಜಯದಶಮಿ ದಸರಾ ಹಬ್ಬದ ಪ್ರಯುಕ್ತ ವರ್ಷಕ್ಕೆ ಒಂದು ಬಾರಿ ಈ ದೇವಾಲಯದಲ್ಲಿ ದೇವಿಯನ್ನು ಭಕ್ತಿಯಿಂದ ಪೂಜಿಸಿ ಆರಾಧಿಸುವ ಗ್ರಾಮಗಳಾದ ಮೈಸೂರು ಜಿಲ್ಲೆ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಕೆಂಪಿಸಿದ್ದನ ಹುಂಡಿ ಗ್ರಾಮ ಹಳ್ಳಿ ದಿಡ್ಡಿ ಉತ್ತನಹಳ್ಳಿ

ಬಿದರಗೂಡು ಮಾಕನಹುಂಡಿ ಹಾಗೂ ಚಿಕ್ಕ ಬಿಚನಹಳ್ಳಿ ಕೇರ್ಗಳ್ಳಿ ಸಾಲುಂಡಿ ಮಂಡಕಳ್ಳಿ ಹದಿನಾರು ಗ್ರಾಮ ಮಾರ್ಗನಹಳ್ಳಿ ಸೇರದಂತೆ ಸುಮಾರು 20ಕ್ಕೂ ಹೆಚ್ಚು ಗ್ರಾಮಗಳ ಭಕ್ತರು ಈ ದೇವಿಯ ಪೂಜೆಯನ್ನು ಮಾಡಿಕೊಂಡು ಪ್ರಸಾದ ತಯಾರು ಮಾಡಿ ಅಲ್ಲೇ ಪ್ರಸಾದವನ್ನು ಸವಿದು ದೇವಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ ಆದರೆ ಈ ದೇವಾಲಯಕ್ಕೆ ವಿದ್ಯುತ್ ದೀಪ ಇಲ್ಲ ಹಾಗೂ ದೇವಾಲಯದ ಅಭಿವೃದ್ಧಿಗೆ ಭೂಮಿಯ ಕೊರತೆ ಇದ್ದು ಪಕ್ಕದಲ್ಲಿ ಸರ್ಕಾರಿ ಭೂಮಿ ಇದ್ದು ಅದನ್ನು ದೇವಾಲಯಕ್ಕೆ ಕೊಟ್ಟರೆ ದೇವಾಲಯದ ಅಭಿವೃದ್ಧಿ ಜೊತೆಗೆ

ಈ ಭಾಗದ ಭಕ್ತರ ಕೋರಿಕೆಯನ್ನು ಈಡೇರಿಸುವ ತಾಯಿಯ ದೇವಾಲಯವು ಮತ್ತಷ್ಟು ಅಭಿವೃದ್ಧಿಗೊಂಡು ಭಕ್ತರ ಕೋರಿಕೆಯನ್ನು ತಾಯಿ ಬನ್ನಿ ಕಾಳಮ್ಮ ತಾಯಿದೇವ ಭಕ್ತರ ಕೋರಿಕೆಯನ್ನು ಈಡೇರಿಸುವಂತಹ ಮಹಾ ಶಕ್ತಿವಂತೆ ಇತಿಹಾಸ ಪ್ರಸಿದ್ಧಿ ಉಳ್ಳ ಈ ದೇವಾಲಯದ ಅಭಿವೃದ್ಧಿಗೆ ಸಹಕರಿಸುವಂತೆ ಭಕ್ತರು ಮನವಿ ಮಾಡಿದ್ದಾರೆ ಇತಿಹಾಸ ಪ್ರಸಿದ್ಧಿ ಉಳ್ಳ ಈ ದೇವಿಯ ಇತಿಹಾಸವನ್ನು ದೇವಿಯ ಭಕ್ತರು ಮಾಧ್ಯಮಗಳ ಮುಂದೆ ವಿವರಿಸಿದ್ದಾರೆ ಇನ್ನು ಮುಂದಾದರೂ ದೇವಾಲಯದ ಅಭಿವೃದ್ಧಿಗೆ ಸಂಬಂಧಪಟ್ಟವರು ಸಹಕಾರ ನೀಡುವವರೇ ಕಾದು ನೋಡೋಣ.

ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ನದಿ ದಂಡೆಯ ಹೊಲದಲ್ಲಿ ಮೊಸಳೆ ಪ್ರತ್ಯಕ್ಷ! ಅರಣ್ಯಾಧಿಕಾರಿಗಳ ಕಾರ್ಯಾಚರಣೆ: ನಾರಾಯಣ್ ನೇತೃತ್ವದಲ್ಲಿ ಮೊಸಳೆ ಸೆರೆ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ಗ್ರಾಮದ ನದಿ ದಂಡೆಯಲ್ಲಿರುವ ದೇವರಾಜ್ ಅವರಿಗೆ ಸೇರಿದ ಹೊಲದಲ್ಲಿ ಮೊಸಳೆಯೊಂದು ಕಾಣಿಸಿಕೊಂಡ ಘಟನೆ ಅಕ್ಟೋಬರ್ 21, 2026ರಂದು ನಡೆದಿದೆ.



ಹೊಲದಲ್ಲಿ ಮೊಸಳೆ ಕಾಣಿಸಿಕೊಂಡಿರುವ ವಿಷಯ ತಿಳಿಯುತ್ತಿದ್ದಂತೆ ನಾರಾಯಣ್ ಅವರ ನೇತೃತ್ವದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದರು. ಬಳಿಕ ಅರಣ್ಯಾಧಿಕಾರಿಗಳು ಕಾರ್ಯಾಚರಣೆ ನಡೆಸಿ ಮೊಸಳೆಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾದರು. ನದಿ ದಂಡೆಯ ಹೊಲದಲ್ಲಿ ಮೊಸಳೆ ಕಾಣಿಸಿಕೊಂಡಿದ್ದರಿಂದ ಸ್ಥಳೀಯರಲ್ಲಿ ಆತಂಕ ಮೂಡಿತ್ತು. ಅರಣ್ಯ ಇಲಾಖೆಯ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಸ್ಥಳಕ್ಕೆ ಆಗಮಿಸಿ ಮೊಸಳೆಯನ್ನು ಸೆರೆಹಿಡಿದಿರುವುದರಿಂದ ಸಂಭವಿಸಬಹುದಾದ ಅಪಾಯವನ್ನು ತಪ್ಪಿಸಲು ನೆರವಾಯಿತು.ಈ ಸಂದರ್ಭದಲ್ಲಿ ಊರಿನ ಎಲ್ಲಾ ಗ್ರಾಮಸ್ಥರು ಫಾರೆಸ್ಟ್ ಅಧಿಕಾರಿ ಗಳಿಗೆ ನೇರವಾದರೂ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ರಾಯಚೂರಿನಲ್ಲಿ ಎಂಐಎಂ ಪಕ್ಷದ ಸಂಘಟನಾ ಕಾರ್ಯ ಪರಿಶೀಲಿಸಿದ ಮೊಹಮ್ಮದ್ ಸಲೀಂ

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸಿದ್ಧತೆ; ಜನಸೇವೆಗೆ ಆದ್ಯತೆ ನೀಡಲು ಪಕ್ಷದ ಪದಾಧಿಕಾರಿಗಳಿಗೆ ಸೂಚನೆ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: JLJALJA (AIMIM) ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಸಂಸದರಾದ ಬ್ಯಾರಿಸ್ಟರ್ ಅಸಾದುದ್ದೀನ್ ಓವೈಸಿ ಅವರ ನಿರ್ದೇಶನದಂತೆ, ಕರ್ನಾಟಕ ರಾಜ್ಯದ ಪಕ್ಷದ ಉಸ್ತುವಾರಿ ಹಾಗೂ ಮಾಜಿ ಕಾರ್ಪೊರೇಟರ್ ಮೊಹಮ್ಮದ್ ಸಲೀಂ ಅವರು ದಿನಾಂಕ 21-10-2026ರಂದು ರಾಯಚೂರು ನಗರಕ್ಕೆ ಭೇಟಿ ನೀಡಿ ಪಕ್ಷದ ಸಂಘಟನಾ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಪಕ್ಷದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ ಯುವಕರನ್ನು ಪಕ್ಷದತ್ತ ಆಕರ್ಷಿಸಲು ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಜನಸೇವೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು.

ಸ್ಥಳೀಯ ಚುನಾವಣೆಗಳಲ್ಲಿ ಸ್ಪರ್ಧಿಸಲು ಸಿದ್ಧತೆ

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೊಹಮ್ಮದ್ ಸಲೀಂ ಅವರು, ಮುಂಬರುವ



ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಎಂಐಎಂ ಪಕ್ಷದಿಂದ ಸೂಕ್ತ ಅಭ್ಯರ್ಥಿಗಳು ಲಭ್ಯವಾದಲ್ಲಿ ಸ್ಪರ್ಧಿಸಲಾಗುವುದು. ಪಕ್ಷವು ವಿವಿಧ ಚುನಾವಣೆಗಳಲ್ಲಿ ಸ್ಪರ್ಧಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಿದೆ ಎಂದು ತಿಳಿಸಿದರು. ಕಳೆದ ಸುಮಾರು 15 ವರ್ಷಗಳಲ್ಲಿ ಸಾಧಿಸಲಾಗದ ಹಲವು ಕಾರ್ಯಗಳನ್ನು ನೂತನ ಅಧ್ಯಕ್ಷರ ನೇತೃತ್ವದಲ್ಲಿ ಕೇವಲ ಆರು ತಿಂಗಳ ಅವಧಿಯಲ್ಲಿ ಪಕ್ಷದ ಪದಾಧಿಕಾರಿಗಳು ಜನಸೇವೆಯೊಂದಿಗೆ ಸಂಘಟನಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ಪಕ್ಷದ ಕಾರ್ಯಚಟುವಟಿಕೆಗಳನ್ನುಸಾಮಾಜಿಕ ಜಾಲತಾಣಗಳ ಮೂಲಕವೂ ಗಮನಿಸಬಹುದು ಎಂದು ಹೇಳಿದರು.

ಶೀಘ್ರದಲ್ಲೇ ಬೃಹತ್ ಬಹಿರಂಗ ಕಾರ್ಯಕ್ರಮ*

ಮುಂದಿನ ದಿನಗಳಲ್ಲಿ ಪಕ್ಷದ ಯುವ ನಾಯಕ ಹಾಗೂ ತೆಲಂಗಾಣದ ನಾಂಪಲ್ಲಿ ಕ್ಷೇತ್ರದ ಶಾಸಕರಾದ ಮಾಜಿದ್ ಹುಸೇನ್ ಅವರ ನೇತೃತ್ವದಲ್ಲಿ ಬೃಹತ್ ಬಹಿರಂಗ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದು ಮೊಹಮ್ಮದ್ ಸಲೀಂ ತಿಳಿಸಿದರು.

ರಾಯಚೂರು ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸುವುದು, ಯುವಕರಿಗೆ ಹೆಚ್ಚಿನ ಅವಕಾಶ ಕಲ್ಪಿಸುವುದು ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಮುಂಬರುವ ಚುನಾವಣೆಗಳಿಗೆ ಸಜ್ಜಾಗುವುದು ಪಕ್ಷದ ಪ್ರಮುಖ ಉದ್ದೇಶವಾಗಿದೆ ಎಂದು ಸಭೆಯಲ್ಲಿ ಒತ್ತಿಹೇಳಲಾಯಿತು.

ಪಕ್ಷದ ಪದಾಧಿಕಾರಿಗಳು ಭಾಗಿ*

ಈ ಸಂದರ್ಭದಲ್ಲಿ ಎಐಎಂಐಎಂ ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ, ನಗರ ಘಟಕದ ಅಧ್ಯಕ್ಷ ಆಬಿದ್ ಮುದ್ಗಲ್, ಪ್ರಧಾನ ಕಾರ್ಯದರ್ಶಿ ಶೈಬಾಜ್ ಖಾನ್, ನಗರ ಜಂಟಿ ಕಾರ್ಯದರ್ಶಿಗಳಾದ ತನ್ವೀರ್ ಅಹ್ಮದ್ ಖಾನ್ ಮತ್ತು ಸಂತೋಷ್ ಸೂರ್ಯವಂಶಿ, ಮಹಿಳಾ ನಗರ ಜಂಟಿ ಕಾರ್ಯದರ್ಶಿ ಪರ್ವೀನ್ ಸಲೀಂ ಶೇಕ್, ಕಾರ್ಯಕಾರಿ ಸದಸ್ಯ ಈರಣ್ಣೇಶ್ ಬೋವಿ, ವಾರ್ಡ್ ನಂ. 29ರ ಅಧ್ಯಕ್ಷ ಮೊಹಮ್ಮದ್ ಅಲಿಮ್, ವಾರ್ಡ್ ನಂ. 33ರ ಅಧ್ಯಕ್ಷ ಅಜ್ಮತ್ ಸೇರಿದಂತೆ ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ವಿಶ್ವ ಆಯೋಡಿನ್ ಕೊರತೆಯ ನ್ಯೂನತೆಗಳ ನಿಯಂತ್ರಣ ದಿನ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಂಧನೂರು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಆಯೋಡಿನ್ ಕೊರತೆಯ ನ್ಯೂನತೆಗಳ ನಿಯಂತ್ರಣ ದಿನಾಚರಣೆ ಹಮ್ಮಿಕೊಳ್ಳಲಾಯಿತು.

ಪ್ರತಿ ವರ್ಷ ಅಕ್ಟೋಬರ್ 21 ರಂದು ಪ್ರಪಂಚದಾದ್ಯಂತ 'ವಿಶ್ವ ಆಯೋಡಿನ್ ಕೊರತೆಯ ನ್ಯೂನತೆಗಳ ನಿಯಂತ್ರಣ ದಿನ' (World Iodine Deficiency Disorders Prevention Day) ಹಾಗೂ ಅದರ ಅಂಗವಾಗಿ ಜಾಗೃತಿ ಸಪ್ತಾಹವನ್ನು ಆಚರಿಸಲಾಗುತ್ತದೆ. ಎಂದು ಶ್ರೀಮತಿ ಗೀತಾ ಹಿರೇಮಠ ತಾಲ್ಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ್ ಆರೋಗ್ಯ ಅಧಿಕಾರಿಗಳ ಕಾರ್ಯಲಯ ಸಿಂಧನೂರ್ ಇವರು ಮಾತನಾಡಿ ನಗರದ ಬಸವೇಶ್ವರ ಕಾಲೋನಿಯ 1ನೇ ಅಂಗನವಾಡಿ ಕೇಂದ್ರದಲ್ಲಿ ಗರ್ಭಿಣಿ ಮಹಿಳೆಯರು ಹಾಗೂ ತಾಯಂದಿರನ್ನು ಕುರಿತು ಆಯೋಡಿನ ಕೊರತೆಯ ನ್ಯೂನ್ಯತೆಗಳು ಮಾನವನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಆಯೋಡಿನ್ ಅತ್ಯಂತ ಅಗತ್ಯವಾದ ಪೋಷಕಾಂಶವಾಗಿದೆ. ಇದರ



ಮಹತ್ವ ಮತ್ತು ಆಯೋಡಿನ್ ಕೊರತೆಯಿಂದ ಉಂಟಾಗುವ ಅಪಾಯಗಳ ಕುರಿತು ಜನರಲ್ಲಿ ಅರಿವು ಮೂಡಿಸುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ ಆಯೋಡಿನ್ ಪ್ರಾಮುಖ್ಯತೆ

ಥೈರಾಯ್ಡ್ ಕಾರ್ಯನಿರ್ವಹಣೆ ಥೈರಾಯ್ಡ್ ಗ್ರಂಥಿಯು ಥೈರಾಕ್ಸಿನ್' ಹಾರ್ಮೋನ್ ಉತ್ಪಾದಿಸಲು ಆಯೋಡಿನ್ ಅತ್ಯಗತ್ಯ.

ಮಕ್ಕಳ ಬೆಳವಣಿಗೆಯ ಗರ್ಭಾವಸ್ಥೆಯಲ್ಲಿ ಮತ್ತು ಬಾಲ್ಯದಲ್ಲಿ ಮಗುವಿನ ಸೂಕ್ತ ದೈಹಿಕ ಹಾಗೂ ಮಾನಸಿಕ/ಮೆದುಳಿನ ಬೆಳವಣಿಗೆಗೆ ಆಯೋಡಿನ್ ಪ್ರಮುಖ ಪಾತ್ರ ವಹಿಸುತ್ತದೆ. ಚಯಾಪಚಯ ಕ್ರಿಯೆ (Metabolism): ದೇಹದ ಶಕ್ತಿ ನಿರ್ವಹಣೆ ಮತ್ತು ಇತರ ಅಂಗಾಂಗಗಳ ಸಮರ್ಪಕ ಕಾರ್ಯನಿರ್ವಹಣೆಗೆ ಸಹಾಯ ಮಾಡುತ್ತದೆ.

ಆಯೋಡಿನ್ ಕೊರತೆಯಿಂದ ಉಂಟಾಗುವ ತೊಂದರೆಗಳು (IDD) ಆಯೋಡಿನ್ ಪ್ರಮಾಣ ಕಡಿಮೆಯಾದಾಗ ದೇಹದಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ:

ಗಾಯಿಟರ್ (Goitre) ಕತ್ತಿನ ಭಾಗದಲ್ಲಿರುವ ಥೈರಾಯ್ಡ್ ಗ್ರಂಥಿ ಬಾತುಕೊಳ್ಳುವುದು. ಮಕ್ಕಳಲ್ಲಿ ಮಾನಸಿಕ/ ಮಂದತ್ವ ಉಂಟಾಗುವುದು ಮೆದುಳಿನ ಸರಿಯಾದ ಬೆಳವಣಿಗೆಯಾಗದೆ ಬುದ್ಧಿಮಂದತೆ ಮತ್ತು ಶೈಕ್ಷಣಿಕ ಹಿನ್ನಡೆ ಉಂಟಾಗಬಹುದು.

ಗರ್ಭಿಣಿಯರಲ್ಲಿ ಗರ್ಭಪಾತದ ತೊಂದರೆ



(Miscarriage), ಮಗು ಹುಟ್ಟುತ್ತಲೇ ಮೃತಪಡುವುದು (Stillbirth) ಅಥವಾ ಅಂಗವಿಕಲತೆಯಿಂದ ಕೂಡಿ ಹುಟ್ಟುವುದು. ಹೈಪೋಥೈರಾಯ್ಡಿಸಮ್ (Hypothyroidism): ನಿರಂತರ ಆಯಾಸ, ತೂಕ ಹೆಚ್ಚಾಗುವುದು, ಒಣ ಚರ್ಮ ಮತ್ತು ಖಿನ್ನತೆ.

ಕಿವುಡು ಮತ್ತು ಮೂಕತನ, ತೀವ್ರ ಕೊರತೆಯಿದ್ದಲ್ಲಿ ಶ್ರವಣ ಮತ್ತು ವಾಕ್ ದೋಷಗಳು ಸಂಭವಿಸಬಹುದು.

ಆಯೋಡಿನ್‌ನ ಮೂಲಗಳು ಮತ್ತು ತಡೆಗಟ್ಟುವಿಕೆಯಲ್ಲಿ ಆಯೋಡಿನ್ ಯುಕ್ತ ಉಪ್ಪು (Iodized Salt) ಅಡುಗೆಗೆ ದಿನನಿತ್ಯ ಬಳಸುವ ಸಾಮಾನ್ಯ ಉಪ್ಪಿನ ಬದಲಿಗೆ ಆಯೋಡಿನ್ ಬೆರೆಸಿದ ಪ್ರಮಾಣೀಕೃತ ಉಪ್ಪನ್ನು ಬಳಸುವುದು ಅತ್ಯಂತ ಸರಳ ಮತ್ತು ಪರಿಣಾಮಕಾರಿ ಮಾರ್ಗ.

ನೈಸರ್ಗಿಕ ಆಹಾರ ಮೂಲಗಳು ಸಮುದ್ರಾಹಾರಗಳು (ಮೀನು, ಏಡಿ, ಸೀಗಡಿ ಇತ್ಯಾದಿ) ಹಾಲು ಮತ್ತು ಹಾಲಿನ ಉತ್ಪನ್ನಗಳು (ಮೊಸರು, ಗಿಣ್ಣು) ಮೊಟ್ಟೆ ಆಯೋಡಿನ್‌ಯುಕ್ತ ಮಣ್ಣಿನಲ್ಲಿ ಬೆಳೆದ ತರಕಾರಿಗಳು ಮತ್ತು ಧಾನ್ಯಗಳು ರಾಷ್ಟ್ರೀಯ ಆಯೋಡಿನ್ ಕೊರತೆ ನ್ಯೂನತೆಗಳ ನಿಯಂತ್ರಣ ಕಾರ್ಯಕ್ರಮ (NIDDCP) ಭಾರತ ಸರ್ಕಾರವು ಆಯೋಡಿನ್ ಕೊರತೆಯನ್ನು ನೀಗಿಸಲು ಈ ವಿಶೇಷ ಯೋಜನೆಯನ್ನು ಜಾರಿಗೆ ತಂದಿದೆ.

ಆಯೋಡಿನ್ ನಿಯಂತ್ರಣ ದಿನದ ಅಂಗವಾಗಿ ಆರೋಗ್ಯ ಇಲಾಖೆ ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ಮತ್ತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಸಪ್ತಾಹದ ಸಮಯದಲ್ಲಿ ಮನೆಗಳಲ್ಲಿ ಬಳಸುವ ಉಪ್ಪಿನಲ್ಲಿ ಆಯೋಡಿನ್ ಪ್ರಮಾಣ ಸರಿಯಾಗಿದೆಯೇ ಎಂಬುದನ್ನು 'ಸಾಲ್ಟ್ ಟೆಸ್ಟಿಂಗ್ ಕಿಟ್' (STK) ಮೂಲಕ ಪರೀಕ್ಷಿಸುವ ಪ್ರಾತ್ಯಕ್ಷಿಕೆಗಳನ್ನು ನೀಡಲಾಗುತ್ತದೆ.

ಸಾಮಾನ್ಯ ಉಪ್ಪಿನ ಬದಲಿಗೆ ಪ್ರತಿದಿನ ಸೂಕ್ತ ಪ್ರಮಾಣದ ಆಯೋಡಿನ್ ಯುಕ್ತ ಉಪ್ಪನ್ನು ಸೇವಿಸುವುದರಿಂದ ಕುಟುಂಬದ ಪ್ರತಿಯೊಬ್ಬರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ರಕ್ಷಿಸಬಹುದು ಎಂದು ತೀಳಿಸಲಾಯಿತು. ಈ ಸಂದರ್ಭದಲ್ಲಿ ಕಮಲಾ ಕಊಅಔ, ಹುಲಿಗೆಮ್ಮ ಆಶಾಯಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಗರ್ಭಿಣಿ, ತಾಯಂದಿರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

DHFWS ಹಾಸನ ನೇಮಕಾತಿ 2026 ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ (Multi Purpose Worker) ಮತ್ತು ಫಾರ್ಮಸಿಸ್ಟ್ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಅಕ್ಟೋಬರ್ 20, 2026

DHFWS ಹಾಸನ ನೇಮಕಾತಿ 2026: ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು CHO ಹುದ್ದೆಗಳ ಒಟ್ಟು 24 ಖಾಲಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (DHFWS) ಹಾಸನವು, ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು CHO ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕೋರಿದೆ. ಕರ್ನಾಟಕ ಸರ್ಕಾರದ ಅಡಿಯಲ್ಲಿ ಹಾಸನದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05-ನವೆಂಬರ್-2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: hassan.nic.in

ಬನ್ನಿ ವಿನಿಮಯದಿಂದ ಬಾಂಧವ್ಯ ವೃದ್ಧಿ ಶ್ರೀ ಚಂದ್ರಶೇಖರ ದೇವರು

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನ ಕೇಸೂರು ಗ್ರಾಮದಲ್ಲಿ ವಿಜಯದಶಮಿ ಹಬ್ಬದ ಅಂಗವಾಗಿ ಭಜನೆಯೊಂದಿಗೆ ಶಮಿ ವೃಕ್ಷದ ಬಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿ, ಬನ್ನಿ ಮುಡಿಯುವ ಕಾರ್ಯಕ್ರಮಕ್ಕೆ ಶ್ರೀ ಚಂದ್ರಶೇಖರ ದೇವರು ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕದಲ್ಲಿ ವಿಜಯದಶಮಿಯಂದು ಬನ್ನಿ ವಿನಿಮಯ ಮಾಡಿಕೊಳ್ಳುವ ಸಂಪ್ರದಾಯಕ್ಕೆ ವಿಶೇಷ ಮಹತ್ವವಿದೆ. ಈ ಆಚರಣೆಯು ಹಳೆಯ ವೈರತ್ವವನ್ನು ಮರೆಸಿ, ಜನರ ನಡುವೆ ಹೊಸ ಬಾಂಧವ್ಯ, ಪ್ರೀತಿ ಹಾಗೂ ಸೌಹಾರ್ದವನ್ನು ಬೆಸೆಯುತ್ತದೆ ಎಂದು ಹೇಳಿದರು.

ಬನ್ನಿ ವಿನಿಮಯಕ್ಕೆ ವಿಶೇಷ ಮಹತ್ವ ವಿಜಯದಶಮಿ ಹಬ್ಬದ ಪ್ರಮುಖ ಆಚರಣೆಯಾದ ಬನ್ನಿ ಮುಡಿಯುವ ಕಾರ್ಯಕ್ರಮವು ಗ್ರಾಮದಲ್ಲಿ ಸಂಭ್ರಮದಿಂದ ನಡೆಯಿತು. ದೇವಸ್ಥಾನ ಹಾಗೂ ಶಮಿ ವೃಕ್ಷದ ಬಳಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಗ್ರಾಮಸ್ಥರು ಪರಸ್ಪರ ಬನ್ನಿ ಎಲೆಗಳನ್ನು ವಿನಿಮಯ ಮಾಡಿಕೊಂಡರು. ಮನೆಮನೆಗೆ ತೆರಳಿ ಹಿರಿಯರಿಗೆ ಬನ್ನಿ ನೀಡಿ ಆಶೀರ್ವಾದ ಪಡೆದರು. "ನಾವು ನೀವು ಬನ್ನಿ ತಗೊಂಡು ಬಂಗಾರದಂಗೆ ಇರೋಣ" ಎಂಬ ಆತ್ಮೀಯ ಮಾತುಗಳೊಂದಿಗೆ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಈ ಮೂಲಕ ಗ್ರಾಮದಲ್ಲಿ ಪ್ರೀತಿ, ವಿಶ್ವಾಸ ಹಾಗೂ ಸೌಹಾರ್ದದ ವಾತಾವರಣ ಮೂಡಿತು.

ಕೇಂದ್ರ ಗೃಹ ಸಚಿವ ಅಮಿತ್‌ಶಾ ಹುಟ್ಟುಹಬ್ಬ : ಶುಭಾಷಯಕೋರಿದ ಪ್ರಧಾನಿ ಮೋದಿ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಜನ್ಮದಿನದ ಶುಭಾಶಯ ಕೋರಿದ್ದಾರೆ.ಶಾ ಅವರ ಆಡಳಿತಾತ್ಮಕ ತಿಳುವಳಿಕೆಯು ಭಾರತದ ಆಂತರಿಕ ಭದ್ರತಾ ವ್ಯವಸ್ಥೆಗಳನ್ನು ಹೆಚ್ಚು ಪರಿಣಾಮ ಕಾರಿಯಾಗಿಸಿದೆ ಎಂದು ಪ್ರಧಾನಿ ಹೇಳಿದ್ದಾರೆ.



2019 ರಿಂದ ದೇಶದ ಗೃಹ ಸಚಿವರಾಗಿರುವ ಅಮಿತ್ ಶಾ ಅವರಿಗೆ ಗುರುವಾರ 62 ವರ್ಷ ತುಂಬಿದೆ. ಗೃಹ ಸಚಿವ ಅಮಿತ್ ಶಾ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಅವರ ಆಡಳಿತಾತ್ಮಕ ತಿಳುವಳಿಕೆಯು ಭಾರತದ ಆಂತರಿಕ ಭದ್ರತಾ ವ್ಯವಸ್ಥೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಿದೆ, ಎಂದು ಪ್ರಧಾನಿ ಮೋದಿ ಎಕ್?ಸ ಮಾಡಿದ್ದಾರೆ. ಮಾವೋವಾದದ ಪಿಡುಗನ್ನು ನಿರ್ಮೂಲನೆ ಮಾಡುವುದು ಮತ್ತು ಮಾದಕವಸ್ತು ಮುಕ್ತ ಸಮಾಜವನ್ನು ನಿರ್ಮಿಸುವ ಸರ್ಕಾರದ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಅಮಿತ್ ಶಾ ಸಾಧಿಸಿರುವ ಯಶಸ್ಸು ವಿಶೇಷವಾಗಿ ಗಮನಾರ್ಹವಾಗಿದೆ ಎಂದು ಪ್ರಧಾನಿ ತಿಳಿಸಿದ್ದಾರೆ. ಅವರು ಜನರ ಸೇವೆಯಲ್ಲಿ ದೀರ್ಘಕಾಲ, ಆರೋಗ್ಯಕರ ಜೀವನ ನಡೆಸಲಿ ಎಂದು ನಾನು ಪ್ರಾರ್ಥಿಸುತ್ತೇನೆ, ಎಂದು ಅವರು ಹೇಳಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಐದು ಗ್ರಾಮಗಳಿಗೆ ಹಗಲು ವೇಳೆ ವಿದ್ಯುತ್ ಪೂರೈಸಲು ರೈತರ ಆಗ್ರಹ: ಜೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಕೆ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ತಾಲೂಕಿನ ಐದು ಗ್ರಾಮಗಳಿಗೆ ಹಗಲು ವೇಳೆಯಲ್ಲಿ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ನೇತೃತ್ವದಲ್ಲಿ ರೈತರು ಹಾಗೂ ವಿವಿಧ ಗ್ರಾಮಗಳ ಮುಖಂಡರು ಜೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ತಾಲೂಕಿನ ಬುಳ್ಳಾಪೂರು, ಕಸನದೊಡ್ಡಿ, ಡೊಣಮರಡಿ, ಕುರುಕುಂದಾ ಹಾಗೂ ಕಲಂಗೇರಾ (ಕುರುಕುಂದಾ ಐ.ಪಿ. ಎಫ್-2) ಗ್ರಾಮಗಳಿಗೆ ಹಗಲು ವೇಳೆಯಲ್ಲಿ ವಿದ್ಯುತ್ ಪೂರೈಸುವಂತೆ ಒತ್ತಾಯಿಸಿ, ಸಿರವಾರದ ಜೆಸ್ಕಾಂ ಕಾರ್ಯಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಲಾಯಿತು. ಕೃಷಿಯನ್ನೇ ಅವಲಂಬಿಸಿರುವ ರೈತರಿಗೆ ವಿದ್ಯುತ್



ಪೂರೈಕೆಯ ಸಮಯ ಅತ್ಯಂತ ಮಹತ್ವದ್ದಾಗಿದೆ. ಹಗಲು ವೇಳೆಯಲ್ಲಿ ವಿದ್ಯುತ್ ದೊರೆತರೆ ರೈತರು ತಮ್ಮ ಕೃಷಿ ಚಟುವಟಿಕೆಗಳನ್ನು ಸುಲಭವಾಗಿ ನಿರ್ವಹಿಸಲು ಅನುಕೂಲವಾಗಲಿದೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ರೈತರ ಬೇಡಿಕೆಗೆ ಸ್ಪಂದಿಸಿ, ಐದು ಗ್ರಾಮಗಳಿಗೂ ಹಗಲು ವೇಳೆಯಲ್ಲಿ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ರೈತರು ಮನವಿ ಮಾಡಿದರು. ಗ್ರಾಮೀಣ ಭಾಗದ ರೈತರ ಸಮಸ್ಯೆಗಳಿಗೆ ಅಧಿಕಾರಿಗಳು ಆದ್ಯತೆ ನೀಡಿ, ವಿದ್ಯುತ್ ಪೂರೈಕೆಯಲ್ಲಿನ ಸಮಸ್ಯೆಗೆ ಸೂಕ್ತ ಪರಿಹಾರ ಕಲ್ಪಿಸಬೇಕು ಎಂಬುದು ರೈತರ ಪ್ರಮುಖ ಬೇಡಿಕೆಯಾಗಿದೆ. ಈ ಕುರಿತು ಜೆಸ್ಕಾಂ ಅಧಿಕಾರಿಗಳು ಗಮನಹರಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಮುಖಂಡರು ಒತ್ತಾಯಿಸಿದರು.

ಮನವಿ ಸಲ್ಲಿಕೆ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸಿರವಾರ ತಾಲೂಕು ಅಧ್ಯಕ್ಷ ಕೆ. ರಾಘವೇಂದ್ರ ಖಾಜನಗೌಡ, ಉಪಾಧ್ಯಕ್ಷ ನಾಗರಾಜಗೌಡ ಹೀರಾ, ಡೊಣಮರಡಿ ಗ್ರಾಮ ಘಟಕದ ಅಧ್ಯಕ್ಷ ಹನುಮೇಶ, ಬುಳ್ಳಾಪೂರದ ಅಂಜಪ್ಪ, ಡೊಣಮರಡಿಯ ಮುಕ್ಕಣ್ಣ, ಬುಳ್ಳಾಪೂರದ ಬಾಬುಸಾಬು, ಡೊಣಮರಡಿಯ ತಿಮ್ಮಣ್ಣ, ಹನುಮಂತ, ರಾಜಸಾಬು, ಯಲ್ಲಪ್ಪ, ಮಸ್ತಾನಸಾಬು, ಮಲ್ಲಯ್ಯ, ಶಿವರಾಯ, ಹನುಮಪ್ಪ, ಅದಪ್ಪ, ಬಾಲುಗೌಡ ಸೇರಿದಂತೆ ವಿವಿಧ ಗ್ರಾಮಗಳ ರೈತರು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಮುದುಕವ್ವ ಗಂಜಿಹಾಳ ಅವರಿಗೆ 2026ನೇ ಸಾಲಿನ ಗೌರವ ಪ್ರಶಸ್ತಿ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹಿರೇಗೊಣ್ಣಾಗರ ಗ್ರಾಮದ ಹಿರಿಯ ಗೀಗಿ ಪದ ಕಲಾವಿದೆ ಶ್ರೀಮತಿ ಮುದುಕವ್ವ ಗಂಜಿಹಾಳ ಅವರು 2026ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿಯ ಗೌರವ ಪ್ರಶಸ್ತಿಗೆ ಆಯ್ಕೆಯಾಗಿರುವುದು ಜಿಲ್ಲೆಯ ಜನಪದ ಕಲಾವಿದರಲ್ಲಿ ಹರ್ಷ ಮೂಡಿಸಿದೆ.

ಕಳೆದ ನಾಲ್ಕು ದಶಕಗಳಿಂದ ಗೀಗಿ ಪದ ಗಾಯನದಲ್ಲಿ ತೊಡಗಿಸಿಕೊಂಡಿರುವ ಮುದುಕವ್ವ ಗಂಜಿಹಾಳ ಅವರು, ನಾಡಿನ ವಿವಿಧ ವೇದಿಕೆಗಳಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡುವ ಮೂಲಕ ಜನಪದ ಕಲೆಯ ಪ್ರಸಾರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ವಿಶೇಷವಾಗಿ ಹರದೇಶಿ ಮತ್ತು ನಾಗೇಶಿ ಪರಂಪರೆಯನ್ನು ತಮ್ಮ ಗಾಯನದ



ಮೂಲಕ ಜೀವಂತವಾಗಿರಿಸಿರುವುದು ಅವರ ಕಲಾಸೇವೆಯ ಹೆಗ್ಗಳಿಕೆಯಾಗಿದೆ. ಔಪಚಾರಿಕ ಶಿಕ್ಷಣ ಹಾಗೂ ಓದು-ಬರಹದ ಜ್ಞಾನವಿಲ್ಲದಿದ್ದರೂ, ತಮ್ಮ ಅಪಾರ ಪ್ರತಿಭೆ, ಸ್ಮರಣಶಕ್ತಿ ಮತ್ತು ಗಾಯನ ಕೌಶಲದ ಮೂಲಕ ಜನಮನ ಗೆದ್ದಿರುವ ಅವರು, ಗ್ರಾಮೀಣ ಜನಪದ ಕಲೆಯ ವಿಶಿಷ್ಟ ಗುರುತಾಗಿದ್ದಾರೆ. ತಮ್ಮ ಗೀಗಿ ಪದಗಳ ಮೂಲಕ ಜನರಲ್ಲಿ ಜನಪದ ಸಂಸ್ಕೃತಿ ಹಾಗೂ ಪರಂಪರೆಯ ಕುರಿತು ಜಾಗೃತಿ ಮೂಡಿಸುತ್ತಾ ಬಂದಿದ್ದಾರೆ.

ಹಳ್ಳಿಗಾಡಿನ ಹಾಡುಹಕ್ಕಿಗೆ ಸಂದ ಸೂಕ್ತ ಗೌರವ ಈ ಕುರಿತು ಮಾತನಾಡಿದ ತಾಲೂಕಿನ ಸಾಹಿತಿ ಹಾಗೂ ಕಲಾವಿದ ವಾಲ್ಮೀಕಪ್ಪ ಹನಮಪ್ಪ ಯಕ್ಕರನಾಳ ಅವರು, "ಹಳ್ಳಿಯಲ್ಲಿ ಹುಟ್ಟಿ ಬೆಳೆದು, ಜನಪದ ಕಲೆಯನ್ನು ಕರಗತ ಮಾಡಿಕೊಂಡು ಗೀಗಿ ಪದಗಳ ಮೂಲಕ ನಾಡಿನ ಜನರಲ್ಲಿ ಜಾಗೃತಿ ಮೂಡಿಸಿದ ಮುದುಕವ್ವ ಗಂಜಿಹಾಳ ಅವರಿಗೆ ಕರ್ನಾಟಕ ಜಾನಪದ ಅಕಾಡೆಮಿಯ 2026ನೇ ಸಾಲಿನ ಗೌರವ ಪ್ರಶಸ್ತಿ ಲಭಿಸಿರುವುದು ಅವರ ಪ್ರತಿಭೆ ಹಾಗೂ ದಶಕಗಳ ಕಲಾಸೇವೆಗೆ ಸಂದ ಸೂಕ್ತ ಗೌರವವಾಗಿದೆ" ಎಂದು ಹೇಳಿದರು.

ಹಳ್ಳಿಗಾಡಿನ ಹಾಡುಹಕ್ಕಿಯ ಸಾಧನೆಯನ್ನು ಗುರುತಿಸಿ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಿದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಸದಸ್ಯರು ಹಾಗೂ ಆಯ್ಕೆ ಸಮಿತಿಗೆ ಅಭಿನಂದನೆ ಸಲ್ಲಿಸಿದರು. ಮುದುಕವ್ವ ಗಂಜಿಹಾಳ ಅವರಿಗೆ ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಶಸ್ತಿ-ಪುರಸ್ಕಾರಗಳು ಲಭಿಸಲಿ. ಅವರ ಜನಪದ ಕಲಾಸೇವೆ ನಿರಂತರವಾಗಿ ಮುಂದುವರಿಯಲಿ ಹಾಗೂ ಗೀಗಿ ಪದದ ಪರಂಪರೆ ಮುಂದಿನ ಪೀಳಿಗೆಗೂ ತಲುಪಲಿ ಎಂದು ವಾಲ್ಮೀಕಪ್ಪ ಹನಮಪ್ಪ ಯಕ್ಕರನಾಳ ಅವರು ಶುಭ ಹಾರೈಸಿದರು.

ಜಾಲಹಳ್ಳಿ ವಲಯದ ಲಿಂಗದಹಳ್ಳಿ ಸಿಎಸ್‌ಸಿ ಸೇವಾಕೇಂದ್ರದಲ್ಲಿ ಭಕ್ತಿಭಾವದಿಂದ ಆಯುಧ ಪೂಜೆ ಆಚರಣೆ

ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪ್ರಾರ್ಥನೆ; ಜನಜಾಗೃತಿ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಗಣ್ಯರು ಹಾಗೂ ಸೇವಾ ಪ್ರತಿನಿಧಿಗಳು ಭಾಗಿ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ವಲಯದ ಲಿಂಗದಹಳ್ಳಿ ಸಿಎಸ್‌ಸಿ (ಅಖಅ) ಸೇವಾಕೇಂದ್ರದಲ್ಲಿ ಬುಧವಾರ ಆಯುಧ ಪೂಜೆಯನ್ನು ಅತ್ಯಂತ ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಈ ಶುಭ ಸಂದರ್ಭದಲ್ಲಿ ಶ್ರೀ ಮಂಜುನಾಥ ಸ್ವಾಮಿಗೆ ಭಕ್ತಿಪೂರ್ವಕವಾಗಿ ಪ್ರಾರ್ಥನೆ ಸಲ್ಲಿಸಿ, ಪೂಜಾ ಕಾರ್ಯಕ್ರಮವನ್ನು ಸಾಂಪ್ರದಾಯಿಕವಾಗಿ ನೆರವೇರಿಸಲಾಯಿತು. ಸೇವಾಕೇಂದ್ರದ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯಲಿ, ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವಂತಾಗಲಿ ಎಂಬ ಆಶಯದೊಂದಿಗೆ ಪೂಜೆ ಸಲ್ಲಿಸಲಾಯಿತು.



ಗಣ್ಯರು ಹಾಗೂ ಸೇವಾ ಪ್ರತಿನಿಧಿಗಳ ಉಪಸ್ಥಿತಿ

ಈ ಸಂದರ್ಭದಲ್ಲಿ ಜನಜಾಗೃತಿ ಸದಸ್ಯರು, ಗ್ರಾಮದ ಗಣ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಪತ್ರಕರ್ತರು, ವಲಯದ ಮೇಲ್ವಿಚಾರಕರು, ಸೇವಾದಾರರು, ಸೇವಾ ಪ್ರತಿನಿಧಿಗಳು, ಸುವಿಧಾ ಸಹಾಯಕರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದು, ಪೂಜಾ ಕಾರ್ಯಕ್ರಮದಲ್ಲಿ ಭಕ್ತಿಯಿಂದ ಭಾಗವಹಿಸಿದರು. ಶ್ರೀ ಮಂಜುನಾಥ ಸ್ವಾಮಿಯ ಕೃಪೆ ಎಲ್ಲರ ಮೇಲೂ ಸದಾ ಇರಲಿ, ಪ್ರತಿಯೊಬ್ಬರ ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿ ಹಾಗೂ ಯಶಸ್ಸು ನೆಲೆಸಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಲಾಯಿತು. ಕಾರ್ಯಕ್ರಮವು ಧಾರ್ಮಿಕ ಭಾವನೆ ಹಾಗೂ ಪರಸ್ಪರ ಸೌಹಾರ್ದದ ವಾತಾವರಣದಲ್ಲಿ ನಡೆಯಿತು.

ತಿಡಿಗೋಳದಲ್ಲಿ ಎಸ್‌ಸಿ-ಎಸ್‌ಟಿ ಸಮುದಾಯದ ಕುಂದುಕೊರತೆಗಳ ಸಭೆ

ದಲಿತರ ಹಕ್ಕುಗಳ ರಕ್ಷಣೆ, ಸಮಸ್ಯೆಗಳ ಪರಿಹಾರಕ್ಕೆ ಅಧಿಕಾರಿಗಳೊಂದಿಗೆ ಚರ್ಚೆ

❑ ನೈಜ್ಯ ದೆಸೆ ನ್ಯೂಸ್

ತಿಡಿಗೋಳ: ಸಮಾಜದಲ್ಲಿ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಕಾನೂನುಬದ್ಧ ಹಕ್ಕುಗಳ ರಕ್ಷಣೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ತುರವಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯ ತಿಡಿಗೋಳ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ (SC-ST) ಸಮುದಾಯದವರ ಕುಂದುಕೊರತೆಗಳ ಸಭೆ ನಡೆಯಿತು.

ಸಿಂಧನೂರು ತಹಶೀಲ್ದಾರ್ ಅರುಣ ದೇಸಾಯಿ, ಸಿಂಧನೂರು ಡಿವೈಎಸ್ಪಿ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ (EO), ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಸಿಂಧನೂರು ಸಿಪಿಐ, ತುರವಿಹಾಳ ಪಿಎಸ್‌ಐ ಹಾಗೂ ದಲಿತ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶ ದಲಿತ ಸಮುದಾಯದ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸಿ, ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ



ಸಭೆ ಆಯೋಜಿಸಲಾಗಿತ್ತು. ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ಅಧಿಕಾರಿಗಳ ಮುಂದೆ ಪ್ರಸ್ತಾಪಿಸಲು ಹಾಗೂ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಲು ಸಭೆ ವೇದಿಕೆಯಾಯಿತು.

ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ತಾಲೂಕು ಪಂಚಾಯತ್ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರಿಂದ ವಿವಿಧ ಇಲಾಖೆಗಳ ವ್ಯಾಪ್ತಿಗೆ ಬರುವ ಸಮಸ್ಯೆಗಳನ್ನು ಚರ್ಚಿಸಲು ಅವಕಾಶ ಕಲ್ಪಿಸಲಾಯಿತು.

ಸಾಮಾಜಿಕ ನ್ಯಾಯಕ್ಕೆ ಆದ್ಯತೆ ಭಾರತದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ ಮತ್ತು ನ್ಯಾಯದ ಹಕ್ಕನ್ನು ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಹಕ್ಕುಗಳನ್ನು ರಕ್ಷಿಸುವುದು, ಜಾತಿ ಆಧಾರಿತ ತಾರತಮ್ಯ ಹಾಗೂ ದೌರ್ಜನ್ಯಗಳನ್ನು ತಡೆಗಟ್ಟುವುದು ಮತ್ತು ಕಾನೂನಿನ ಪ್ರಕಾರ ನ್ಯಾಯ ದೊರಕುವಂತೆ ನೋಡಿಕೊಳ್ಳುವುದು ಸಂಬಂಧಪಟ್ಟ ಇಲಾಖೆಗಳ ಪ್ರಮುಖ ಜವಾಬ್ದಾರಿಯಾಗಿದೆ.

ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಗೂ ದಲಿತ ಮುಖಂಡರು ಒಂದೇ ವೇದಿಕೆಯಲ್ಲಿ ಭಾಗವಹಿಸುವ ಇಂತಹ ಸಭೆಗಳು ಸಾರ್ವಜನಿಕರು ಮತ್ತು ಆಡಳಿತ ವ್ಯವಸ್ಥೆಯ ನಡುವೆ ಸಂಪರ್ಕ ಬೆಳೆಸಲು ಸಹಕಾರಿಯಾಗುತ್ತವೆ. ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ಸಂಬಂಧಪಟ್ಟ ಇಲಾಖೆಗಳ ಮೂಲಕ ಪರಿಹಾರ ಕಂಡುಕೊಳ್ಳಲು ಇವು ನೆರವಾಗುತ್ತವೆ.

ಅಧಿಕಾರಿಗಳು ಮತ್ತು ಮುಖಂಡರ ಉಪಸ್ಥಿತಿ ಸಭೆಯಲ್ಲಿ ಸಿಂಧನೂರು ತಹಶೀಲ್ದಾರ್ ಅರುಣ ದೇಸಾಯಿ, ಡಿವೈಎಸ್ಪಿ, ತಾಲೂಕು ಪಂಚಾಯತ್ ಇಒ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಸಿಂಧನೂರು ಸಿಪಿಐ, ತುರವಿಹಾಳ ಪಿಎಸ್‌ಐ ಹಾಗೂ ದಲಿತ ಮುಖಂಡರು ಪಾಲ್ಗೊಂಡಿದ್ದರು.

ತಿಡಿಗೋಳ ಗ್ರಾಮದಲ್ಲಿ ನಡೆದ ಈ ಸಭೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರ ಕುಂದುಕೊರತೆಗಳನ್ನು ಆಲಿಸಲು ಹಾಗೂ ಅವುಗಳ ಪರಿಹಾರಕ್ಕಾಗಿ ಸಂಬಂಧಪಟ್ಟ ಇಲಾಖೆಗಳ ಗಮನ ಸೆಳೆಯಲು ವೇದಿಕೆಯಾಯಿತು.

ರಾಯಚೂರಿನಲ್ಲಿ AIMIM ಕರ್ನಾಟಕ ಉಸ್ತುವಾರಿ ಸಲೀಂ ಸಾಬ್ ಭೇಟಿ: ಪಕ್ಷದ ಸಂಘಟನೆ ಬಲವರ್ಧನೆ ಕುರಿತು ಮಹತ್ವದ ಚರ್ಚೆ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ಂಖಒಖಒ ಕರ್ನಾಟಕ ಉಸ್ತುವಾರಿ ಹಾಗೂ ಹೈದರಾಬಾದ್ ಕಾರ್ಪೊರೇಟರ್ ಜನಾಬ್ ಸಲೀಂ ಸಾಬ್ ಅವರು ರಾಯಚೂರು ಪ್ರವಾಸದಲ್ಲಿದ್ದ ಸಂದರ್ಭದಲ್ಲಿ, ಂಖಒಖಒ ಪಕ್ಷದ ಮುಖಂಡರು ಅವರನ್ನು ಭೇಟಿ ಮಾಡಿ ಪಕ್ಷದ ಸಂಘಟನೆ ಮತ್ತು ಮುಂದಿನ ರಾಜಕೀಯ ಕಾರ್ಯತಂತ್ರಗಳ ಕುರಿತು ಮಹತ್ವದ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಂಖಒಖಒ ರಾಯಚೂರು ಜಿಲ್ಲಾ ಅಧ್ಯಕ್ಷರಾದ ಶಬ್ಬೀರ್ ಸಾಬ್, ರಾಯಚೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೈಬಾಜ್ ಶೇಖ್ ಹಾಗೂ ಂಖಒಖಒ ಮುದಗಲ್ ಅಧ್ಯಕ್ಷರಾದ ಅಬೀದ್ ಅವರು ಉಪಸ್ಥಿತರಿದ್ದರು. ಸಭೆಯಲ್ಲಿ ಮುಂಬರುವ ದಿನಗಳಲ್ಲಿ ಂಖಒಖಒ ಪಕ್ಷವನ್ನು ರಾಯಚೂರು ಜಿಲ್ಲೆ ಹಾಗೂ ಮುದಗಲ್ ಭಾಗದಲ್ಲಿ ಮತ್ತಷ್ಟು ಬಲಿಷ್ಠಗೊಳಿಸುವುದು, ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ವಿಸ್ತರಿಸುವುದು ಮತ್ತು ಮುಂಬರುವ ಚುನಾವಣೆಗಳಿಗೆ ಸಿದ್ಧತೆ ನಡೆಸುವ ಕುರಿತು ಚರ್ಚಿಸಲಾಯಿತು.

ಪಕ್ಷದ ತತ್ವ, ಸಿದ್ಧಾಂತ ಹಾಗೂ ಜನಪರ ಕಾರ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವುದು,



ಯುವಕರನ್ನು ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಮತ್ತು ಸ್ಥಳೀಯ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಪಕ್ಷದ ಮೇಲಿನ ವಿಶ್ವಾಸವನ್ನು ಹೆಚ್ಚಿಸುವ ಕುರಿತು ಸಮಾಲೋಚನೆ ನಡೆಸಲಾಯಿತು. AIMIM ಪಕ್ಷದ ಬೆಳವಣಿಗೆಗಾಗಿ ಮುಖಂಡರು ಹಾಗೂ ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮಿಸಬೇಕು. ಜನರ ಸಮಸ್ಯೆಗಳಿಗೆ ಧ್ವನಿಯಾಗಿ, ಜನಪರ ಕಾರ್ಯಚಟುವಟಿಕೆಗಳ ಮೂಲಕ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂಬ ಸಂಕಲ್ಪವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲಾಯಿತು.

ರಾಯಚೂರು ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸಿ, ಮುದಗಲ್ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಪಕ್ಷದ ಜನಸಂಪರ್ಕವನ್ನು ವಿಸ್ತರಿಸುವ ನಿಟ್ಟಿನಲ್ಲಿ ಮುಖಂಡರು ಕಾರ್ಯನಿರ್ವಹಿಸುವ ಕುರಿತು ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಂಖಒಖಒ ಕರ್ನಾಟಕ ಉಸ್ತುವಾರಿ ಜನಾಬ್ ಸಲೀಂ ಸಾಬ್, ರಾಯಚೂರು ಜಿಲ್ಲಾ ಅಧ್ಯಕ್ಷ ಶಬ್ಬೀರ್ ಸಾಬ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೈಬಾಜ್ ಶೇಖ್ ಹಾಗೂ ಮುದಗಲ್ ಅಧ್ಯಕ್ಷ ಅಬೀದ್ ಉಪಸ್ಥಿತರಿದ್ದರು.

ವಚನ ದರ್ಶನ

ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ,–
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾನುಡಿಗೆ ತಕ್ಕ ನಡೆಯ ಕ
ಂಡೊಡೆ,ಕೂಡಲಸಂಗಮದೇವನೊಳಗಿರ್ಪನಯ್ಯಾ

ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ಮಾನವನ ಅಂತರಂಗ ಮತ್ತು ಬಹಿರಂಗದ ನಡುವೆ ಇರುವ ವ್ಯತ್ಯಾಸವನ್ನು ಹಾಗೂ ಆತ್ಮಶುದ್ಧಿಯ ಮಹತ್ವವನ್ನು ಅತ್ಯಂತ ಮಾರ್ಮಿಕವಾಗಿ ವಿವರಿಸಿದ್ದಾರೆ.

೧೨ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ ಹಾಗೂ ಶರಣ ಜಗದ್ಗುರು ವಿಶ್ವಗುರು ಬಸವಣ್ಣನವರ ಒಂದು ಅತ್ಯಂತ ಪ್ರಸಿದ್ಧ ಹಾಗೂ ಆತ್ಮಾವಲೋಕನ ವಚನವಾಗಿದೆ.

ನಡೆ–ನುಡಿಯ ವ್ಯತ್ಯಾಸ: "ನನ್ನ ನಡವಳಿಕೆಯೇ ಒಂದು ರೀತಿ ಇದೆ, ಆದರೆ ನಾನು ಮಾತನಾಡುವುದು ಇನ್ನೊಂದು ರೀತಿ ಇದೆ" ಎಂದು ಬಸವಣ್ಣನವರು ತಮ್ಮ ಮೂಲಕ ಇಡೀ ಮಾನವ ಸಮಾಜದ ಮುಖವಾಡವನ್ನು ಬಿಚ್ಚಿಡುತ್ತಾರೆ. ನಾವು ಹೇಳುವುದೇ ಬೇರೆ, ಮಾಡುವುದೇ ಬೇರೆ ಆಗಿರುವುದನ್ನು ಇದು ಸೂಚಿಸುತ್ತದೆ.

ಅಂತರಂಗದ ಅಶುದ್ಧತೆ: ಹೀಗೆ ನಮ್ಮ ಮಾತು ಮತ್ತು ಕೃತಿಯಲ್ಲಿ ವ್ಯತ್ಯಾಸ ಇರಲು ಕಾರಣ ನಮ್ಮ ಮನಸ್ಸು ಅಂತರಂಗದಲ್ಲಿ ಪರಿಶುದ್ಧವಾಗಿಲ್ಲದೇ ಇರುವುದು.

ದೇವರ ಸಾಕ್ಷಾತ್ಕಾರ: ಯಾವ ವ್ಯಕ್ತಿ ತಾನು ಆಡುವ ನುಡಿಗೆ ತಕ್ಕಂತೆ ತನ್ನ ನಡೆಯನ್ನು (ನಡವಳಿಕೆಯನ್ನು) ರೂಪಿಸಿಕೊಳ್ಳುತ್ತಾನೋ, ಅಂತಹ ಪರಿಶುದ್ಧ ಮನಸ್ಸಿನಲ್ಲಿ ಭಗವಂತನಾದ 'ಕೂಡಲಸಂಗಮದೇವನು' ನೆಲೆಸಿರುತ್ತಾನೆ ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ.

ಸರಳವಾಗಿ ಹೇಳುವುದಾದರೆ, "ನುಡಿದಂತೆ ನಡೆಯುವುದೇ" ನಿಜವಾದ ಧರ್ಮ ಮತ್ತು ಭಕ್ತಿ ಎಂಬುದೇ ಈ ವಚನದ ಮುಖ್ಯ ಸಂದೇಶವಾಗಿದೆ. ಸರ್ವರಿಗೂ ಶರಣರ ವಚನಗಳು ಮನುಕುಲದ ದಾರಿದೀಪವಾಗಿವೆ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ–ಸಿಂಧನೂರು. 998094144

ಆಗತ್ತೂರು ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣ

ಉದ್ಘಾಟನಾ ಮಹೋತ್ಸವದಲ್ಲಿ ಭಾಗಿಯಾದ ಶ್ರೀಪ್ರಸನ್ನಾನಂದಪುರಿ ಮಹಾ ಸ್ವಾಮೀಜಿ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅನಿಲ್ ಚಿಕ್ಕಮಾದು ಗಣೇಶ್ ಪ್ರಸಾದ್

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಮೈಸೂರು ಜಿಲ್ಲೆ, ಸರಗೂರು ತಾಲೂಕು ಆಗತ್ತೂರು ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮ

ಉದ್ಘಾಟನಾ ಮಹೋತ್ಸವದಲ್ಲಿ ಭಾಗಿಯಾದ ಶ್ರೀ ಪ್ರಸನ್ನಾನಂದಪುರಿ ಮಹಾ ಸ್ವಾಮೀಜಿ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅನಿಲ್ ಚಿಕ್ಕಮಾದು ಗಣೇಶ್ ಪ್ರಸಾದ್ ಭಾಗಿಯಾಗಿ ಶ್ರೀ ಮಹರ್ಷಿ ವಾಲ್ಮೀಕಿ ರವರನ್ನು ಸ್ಮರಿಸಿದರು

ಪರಮಪೂಜ್ಯ ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ, ನಂಜನಗೂಡು ಕ್ಷೇತ್ರದ ಶಾಸಕರಾದ ದರ್ಶನ್



ಧ್ರುವನಾರಾಯಣ್ ಅವರು ಪಾಲ್ಗೊಂಡು, ಪುತ್ಥಳಿಯನ್ನು ಅನಾವರಣಗೊಳಿಸಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಮಹರ್ಷಿ ವಾಲ್ಮೀಕಿಯವರ ಜೀವನ ಮತ್ತು ಆದರ್ಶಗಳು ಸಮಾಜದಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಲು ಸದಾ ಪ್ರೇರಣೆಯಾಗಿವೆ. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ನ್ಯಾಯಯುತ ಹಾಗೂ ಸಮಾನತೆಯ ಸಮಾಜ ನಿರ್ಮಾಣ–ಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂದು ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ರವರು ಹೇಳಿದರು ಈ ಸಂದರ್ಭದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು ದರ್ಶನ್ ಧ್ರುವನಾರಾಯಣ್ ಗಣೇಶ್ ಪ್ರಸಾದ್ ರವರು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಸಿ ಬಸವರಾಜ್ , ರಾಮಚಂದ್ರು ಹೀರೆಗೌಡ, ನರಸಿಂಹಮೂರ್ತಿ ಸೋಮೇಶ್ , ದೊಡ್ಡ ನಾಯಕ , ಜೆ. ಪ್ರಕಾಶ್ ಕಾಟೂರು, ದೇವರಾಜ್ ಶಂಭುಲಿಂಗ ನಾಯಕ, ನಾಗರಾಜ್ ಅಪ್ಪಣ್ಣ , ಸದಾನಂದ್ , ಕೃಷ್ಣ ರವರು ಸೇರಿದಂತೆ ಗ್ರಾಮದ ಮುಖಂಡರು ಗ್ರಾಮಸ್ಥರು ಹಾಜರಿದ್ದರು.

ಅಯೋಡಿಯುಕ್ತ ಉಪ್ಪು ಆರೋಗ್ಯದ ಗುಟ್ಟು ... ಅರವಿಂದ ಕುಮಾರ

ವಿಶ್ವ ಅಯೋಡಿನ್ ಕೊರತೆ ದಿನಾಚರಣೆ: ಸಾರ್ವಜನಿಕರಲ್ಲಿ ಅಯೋಡಿನ್ ಕೊರತೆಯ ಬಗ್ಗೆ ಆರೋಗ್ಯ ಜಾಗೃತಿ

❏ ನೈಜ್ಯ ದೆಸೆ ನ್ಯೂಸ್

ಬಿಚ್ಚಾಲಿ ಕ್ಯಾಂಪ್: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಗಿಲ್ಲೆಸೂಗೂರು ವತಿಯಿಂದ ಬಿಚ್ಚಾಲಿ ಕ್ಯಾಂಪಿನ ಅಂಗನವಾಡಿ ಕೇಂದ್ರದಲ್ಲಿ ವಿಶ್ವ ಅಯೋಡಿನ್ ಕೊರತೆ ದಿನದ ಅಂಗವಾಗಿ ಗರ್ಭಿಣಿ, ಬಾಣಂತಿಯರು ಸಾರ್ವಜನಿಕರಿಗೆ ಜನಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಟಮಾರಿ ಆರೋಗ್ಯ ಕೇಂದ್ರದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅರವಿಂದ ಕುಮಾರ ಅವರು ಮಾತನಾಡಿ, ಸಾರ್ವಜನಿಕ–ರಿಗೆ ಅಯೋಡಿಯುಕ್ತ ಉಪ್ಪಿನ ಬಳಕೆಯ ಮಹತ್ವ ಹಾಗೂ ಅಯೋಡಿನ್ ಕೊರತೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳ ಕು–ರಿತು ಮಾಹಿತಿ ನೀಡಲು, ಪ್ರತಿವರ್ಷ ಅಕ್ಟೋಬರ್ 21 ವಿಶ್ವದಾದ್ಯಂತ ಅಯೋಡಿನ್ ಕೊರತೆ ದಿನವನ್ನಾಗಿ ಆಚರಿಸಲಾಗುತ್ತಿದೆ.

ಹೃದಯದ ಬಡಿತ, ಚಯಾಪಚಯ,ದೇಹದ ಉಷ್ಣತೆ ಮತ್ತು ಸ್ನಾಯುಗಳ ಸಂಕೋಚನದಂತಹ ಅನೇಕ ದೈಹಿಕ ಕಾರ್ಯಗಳ ಮೇಲೆ ಪರಿಣಾಮ ಬೀರುವ ಗ್ರಂಥಿಯಾದ, ಥೈರಾಯ್ಡ್ ಗ್ರಂಥಿಗೆ ದೇಹಕ್ಕೆ ಅಗತ್ಯವಿರುವ ಸೂಕ್ಷ್ಮ ಪೋಷಕಾಂಶವೆಂದರೆ ಅಯೋಡಿನ್, ಹೀಗಾಗಿ ಅಯೋಡಿನ್ ಪೋಷಕಾಂಶ ಬಹುಮುಖ್ಯವಾಗಿ, ದೈಹಿಕ ಆರೋಗ್ಯ ಮತ್ತು ಮಾನಸಿಕ ಬೆಳವಣಿಗೆಗೆ ಕಾರಣವಾಗುವುದು.

ಗರ್ಭಾವಸ್ಥೆಯಲ್ಲಿ ಮತ್ತು ಬಾಲ್ಯದಲ್ಲಿ ಇದರ ಕೊರತೆಯು ವಿಶೇಷವಾಗಿ ಹಾನಿಕರವಾಗಿದೆ, ಏಕೆಂದರೆ ಇದು ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯದ ನಷ್ಟ, ಮಾನಸಿಕ ಬೆಳವಣಿಗೆಯಲ್ಲಿ ಕುಂಠಿತ, ನಿರ್ಜೀವ ಜನನ ಮತ್ತು ಗರ್ಭಪಾತಕ್ಕೆ ಕಾರಣವಾಗಬಹುದು, ವಿಶೇಷವಾಗಿ ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಅಯೋಡಿನ್ ಪ್ರಮುಖ ಪಾತ್ರ ವಹಿಸುತ್ತದೆ ಎಂದು ವಿವರಿಸಲಾಯಿತು. ಅಯೋಡಿನ್ ಕೊರತೆಯಿಂದ ಕಂಠಮಾಲೆ (ಗಾಯಿಟರ್), ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತತೆ ಹಾಗೂ ಬೌದ್ಧಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ಸಾರ್ವಜನಿಕರು ಪ್ರತಿದಿನ ಅಯೋಡಿನ್ ಯುಕ್ತ ಉಪ್ಪನ್ನು ಬಳಸಬೇಕು.

ಅಯೋಡಿನ್ ಉಪ್ಪು



ಆರೋಗ್ಯಕ್ಕೆ ಬಹುಮುಖ್ಯ ಎನ್ನುವ ಸಂದೇಶ ನೀಡಲಾಯಿತು, ನಂತರ ಮಾತನಾಡಿದ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಚೆನ್ನಾವೀರಮ್ಮ ಅವರು ಅಯೋಡಿನ್ ಕೊರತೆಯನ್ನು ತಡೆಗಟ್ಟುವಲ್ಲಿ ಸಾರ್ವಜನಿಕರ ಸಹಕಾರ ಅತ್ಯಂತ ಮುಖ್ಯವಾಗಿದ್ದು, ಪ್ರತಿಯೊಂದು ಕುಟುಂಬವೂ ಅಯೋಡಿನ್ ಯುಕ್ತ ಉಪ್ಪಿನ ಬಳಕೆಗೆ ಆದ್ಯತೆ ನೀಡಬೇಕು ಎಂದು ಮನವಿ ಮಾಡಲಾಯಿತು. "ಅಯೋಡಿನ್ ಯುಕ್ತ ಉಪ್ಪು ಆರೋಗ್ಯದ ಗುಟ್ಟು " ಎಂಬ ಸಂದೇಶದೊಂದಿಗೆ ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸಲಾಯಿತು. ಆಶಾ ಕಾರ್ಯಕರ್ತೆ ನಿರ್ಮಲ, ಅಂಗನವಾಡಿ ಸಹಾಯಕಿ ದುರ್ಗಮ್ಮ ಉಪಸ್ಥಿತರಿದ್ದರು.

ಕೊಪ್ಪಳದಿಂದ ಶ್ರೀ ಸುತ್ತೂರು ಮಠಕ್ಕೆ'' ಹ್ಯಾಂಡಲ್ ಇಲ್ಲದ ಬೈಕ್ ಸವಾರಿ ಮಾಡಿಕೊಂಡು ಬಂದ ಬೈಕ್ ಸವಾರನಗೆ ಸುತ್ತೂರು ಶ್ರೀಗಳ ಆಶೀರ್ವಾದ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಕೊಪ್ಪಳದಿಂದ ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಬಂದ ಹ್ಯಾಂಡಲ್ ಇಲ್ಲದ ಬೈಕ್ ಸವಾರನಿಗೆ ಪರಮಪೂಜ್ಯ ಜಗದ್ಗುರು ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮೀಜಿಯವರು ಆಶೀರ್ವಾದ ಮಾಡಿ ಶುಭ ಹಾರೈಸಿದರು



ಈ ಸಂದರ್ಭದಲ್ಲಿ ಸಂದರ್ಭದಲ್ಲಿ ಜಗದ್ಗುರುಗಳವರ ಎದುರು ಹ್ಯಾಂಡಲ್ಸ್ ಇಲ್ಲ ಬೈಕ್ ಚಾಲನೆ ಮಾಡಿದ ಕ್ಷಣ ವನ್ನು ಸನ್ಮಾನ ಆಶೀರ್ವಾದ ನೀಡಿದ ಶ್ರೀ ಸುತ್ತೂರು ಜಗದ್ಗುರು ಮಹಾ ಸ್ವಾಮೀಜಿಯವರ ಸನ್ನಿಧಿಯಲ್ಲಿ ಜೊತೆಯಲ್ಲಿ ಶ್ರೀ ಗುರುಪರಂಪರೆ ಮುಖ್ಯಸ್ಥರು ಉತ್ತರಾಧಿಕಾರಿಗಳು ಸಹ ಇದ್ದು ವೀಕ್ಷಿಸಿದರು. ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಬೈಕ್ ಶವಾರ ಇದು ನನ್ನ ಪುಣ್ಯ ಎಂದು ಸೂತರು ಶ್ರೀಗಳನ್ನು ಸ್ಮರಿಸಿಕೊಂಡರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಮೈಸೂರು ದಸರೆಗೆ ಕರಾಳ ಛಾಯೆ: ಜಂಬುಸವಾರಿ ವೀಕ್ಷಣೆ ವೇಳೆ ಪೊಲೀಸ್ ಲಾಠಿ ಏಟಿಗೆ 4 ವರ್ಷದ ಕಂದಮ್ಮ ಗಂಭೀರ, ಐಸಿಯುನಲ್ಲಿ ಜೀವನ್ಮರಣ ಹೋರಾಟ!

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಅಕ್ಟೋಬರ್.22: ವಿಶ್ವವೇ ಬೆರಗುಗಣ್ಣಿನಿಂದ ನೋಡುವ ನಮ್ಮ ನಾಡಹಬ್ಬ ಮೈಸೂರು ದಸರಾ ಜಂಬೂಸವಾರಿ ವೈಭವದ ನಡುವೆಯೇ ಮನಕಲಕುವ ಘಟನೆಯೊಂದು ನಡೆದಿದೆ ಬನ್ನಿಮಂಟಪದ ಬಳಿಯ. ಹೈವೇ ಸರ್ಕಲ್ ಬಳಿ ಜನಸಾಗರದ ನಡುವೆ ಪೋಷಕರ ಬೆರಳು ಹಿಡಿದು ದಸರಾ ನೋಡಲು ಬಂದಿದ್ದ 4 ಐದುವರ್ಷದ ಪುಟ್ಟ ಕಂದನ ತಲೆಗೆ ಪೊಲೀಸರ ಲಾಠಿ ಪೆಟ್ಟು ಬಿದ್ದು, ರಕ್ತದ ಮಡುವಿನಲ್ಲಿ ಬಿದ್ದು ಈಗ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಜೀವನ್ಮರಣ ಹೋರಾಟ ನಡೆಸುತ್ತಿದ್ದಾನೆ.

ಕುಟುಂಬಸ್ಥರ ಆಕ್ರಂದನ ಮುಗಿಲು



ಮುಟ್ಟಿದ್ದು, ಅವರ ಆರೋಪದ ಪ್ರಕಾರ ನಿನ್ನೆ ಸಂಜೆ ಜಂಬೂಸವಾರಿ ಮೆರವಣಿಗೆ ವೇಳೆ ಹೈವೇ ಸರ್ಕಲ್ ಬಳಿ ಜನದಟ್ಟಣೆ ನಿಯಂತ್ರಿಸುತ್ತಿದ್ದ ಪೊಲೀಸರು ಏಕಾಏಕಿ ಲಾಠಿ ಬೀಸಿದ್ದಾರೆ. ಆ ವೇಳೆ ಪಕ್ಕದಲ್ಲೇ ನಿಂತಿದ್ದ ಪುಟ್ಟ ಮಗುವಿನ ಮೃದು ತಲೆಗೆ ಲಾಠಿಯ ತುದಿ ಬಡಿದಿದೆ. ಇದ–ರಿಂದ ತಲೆಗೆ ಬಿದ್ದ ರಾಟಿ ಏಟು ಪರಿಣಾಮದಿಂದ ತಲೆಗೆ ತುಂಬಾ ಗಾಯವಾಗಿ ರಕ್ತಸಾರವಾಗಿದೆ ಏಟಿನ ರಭಸಕ್ಕೆ ಮಗುವಿನ ತಲೆಯಿಂದ ರಕ್ತ ಚಿಮ್ಮಿದೆ. ಗಾಬರಿಗೊಂಡ ಪೋಷಕರು ಮಗುವನ್ನು ಎತ್ತಿಕೊಂಡು ಆಸ್ಪತ್ರೆಗೆ ಓಡಿದ್ದಾರೆ. ಸದ್ಯ ಮಗುವಿನ ತಲೆಗೆ ಗಂಭೀರ ಗಾಯವಾಗಿದ್ದು, ವೈದ್ಯರು ತುರ್ತು ಚಿಕಿತ್ಸೆ ನೀಡುತ್ತಿದ್ದಾರೆ. ಮಗುವಿನ ತಲೆಗೆ ಹೊಲಿಗೆ ಹಾಕಿರುವ ಹೃದಯ ವಿದ್ರಾವಕ ಫೋಟೋ ಈಗ ಎಲ್ಲರ ಕಣ್ಣಂಚಿನಲ್ಲಿ ನೀರು ತರಿಸುತ್ತಿದೆ. ಅದರಲ್ಲೂ ಮಗುವಿನ ಪೋಷಕರ ರೋಧನೆ ಮುಗಿಲು ಮುಟ್ಟುತಿದೆ "ದಸರಾ ನೋಡಲು ಕರೆದುಕೊಂಡು ಬಂದೆವು, ಆದರೆ ಮಗು ರಕ್ತದಲ್ಲಿ ಬಿದ್ದಿದ್ದನ್ನು ನೋಡಲಾಗಲಿಲ್ಲ. ಪುಟ್ಟ ಮಗುವಿಗೆ ಲಾಠಿ ಬೀಸಬೇಕಿತ್ತಾ?" ಎಂದು ಮಗುವಿನ ತಾಯಿ ಕಣ್ಣೀರು ಹಾಕುತ್ತಾ ಪ್ರಶ್ನಿಸಿದ್ದಾರೆ. ಇದು ಆಕಸ್ಮಿಕವೋ ಅಥವಾ ಪೊಲೀಸರ ನಿರ್ಲಕ್ಷ್ಯವೋ ಎಂಬುದು ತನಿಖೆಯಿಂದಷ್ಟೇ ತಿಳಿಯಬೇಕಿದೆ. ಈ ಸಂಬಂಧ ಮಗುವಿನ ಕುಟುಂಬಸ್ಥರು ಹಿರಿಯ ಪೊಲೀಸ್ ಅಧಿಕಾ–ರಿಗಳಿಗೆ ದೂರು ನೀಡಲು ಮುಂದಾಗಿದ್ದಾರೆ. ಪೊಲೀಸ್ ಆಯುಕ್ತರು ಈ ಬಗ್ಗೆ ತನಿಖೆಗೆ ಆದೇಶಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ ದಸರಾ ಸಂಭ್ರಮದ ನಡುವೆ ಅಮಾಯಕ ಕಂದನ ರೋದನ ಎಲ್ಲರ ಮನಸ್ಸನ್ನು ಕಲಕಿದೆ. ಈ ಘಟನೆ ಬಗ್ಗೆ ಹಿರಿಯ ಪೊಲೀಸ್ ಅಧಿಕಾ–ರಿಗಳು ಇದಕ್ಕೆ ಕಾರಣ ಆದವರ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳುತ್ತಾರೆ ಕಾದು ನೋಡೋಣ

ಶ್ರೇಷ್ಠ ತೋಟಗಾರಿಕಾ ರೈತ ಪ್ರಶಸ್ತಿಗೆ ಅರ್ಜಿ ಆಹ್ವಾನ

ಅಕ್ಟೋಬರ್ 30 ಅರ್ಜಿ ಸಲ್ಲಿಸಲು ಕೊನೆಯ ದಿನ; ಡಿಸೆಂಬರ್ 23ರಿಂದ ತೋಟಗಾರಿಕೆ ಮೇಳ–2026

❏ ನೈಜ್ಯ ದೆಸೆ ನ್ಯೂಸ್

ಬಾಗಲಕೋಟೆ: ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವತಿಯಿಂದ 2026ರ ಡಿಸೆಂಬರ್ 23ರಿಂದ 25ರವರೆಗೆ ಮೂರು ದಿನಗಳ ಕಾಲ ತೋಟಗಾರಿಕೆ ಮೇಳ–2026 ಆಯೋಜಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಶ್ರೇಷ್ಠ ತೋಟಗಾರಿಕಾ ರೈತ ಹಾಗೂ ರೈತ ಮಹಿಳೆಯರ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹವಾಮಾನ ವೈಪರೀತ್ಯದಲ್ಲಿ ಸುಸ್ಥಿರ ತೋಟಗಾರಿಕೆ' ಎಂಬ ಧ್ಯೇಯವಾಕ್ಯದೊಂದಿಗೆ ನಡೆಯಲಿರುವ ಈ ಮೇಳದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಕರ್ನಾಟಕದ 25 ಜಿಲ್ಲೆಗಳಿಂದ ತಲಾ ಒಬ್ಬ ಶ್ರೇಷ್ಠ ತೋಟಗಾ–ರಿಕಾ ರೈತ ಅಥವಾ ರೈತ ಮಹಿಳೆಯನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ತೋಟಗಾರಿಕೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ರೈತರು ಹಾಗೂ ರೈತ ಮಹಿಳೆಯರಿಗೆ ತಮ್ಮ ಅನುಭವ, ಸಾಧನೆ ಮತ್ತು ಕೃಷಿ ತಂತ್ರಜ್ಞಾನಗಳ ಅಳವಡಿಕೆಯನ್ನು ಗುರುತಿಸಿಕೊಳ್ಳಲು ಇದೊಂದು ಉತ್ತಮ ಅವಕಾಶವಾಗಿದೆ.



ಅರ್ಜಿ ಸಲ್ಲಿಸಲು ಅಕ್ಟೋಬರ್ 30 ಕೊನೆಯ ದಿನ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಆಸಕ್ತಿ ಹೊಂದಿರುವ ರೈತರು ವಿಶ್ವವಿದ್ಯಾಲಯದ ವೆಬ್‌ಸೈಟ್ "www. uhsbagalkot.karnataka.gov.in" (https:// uhsbagalkot.karnataka.gov.in) ಮೂಲಕ ಅರ್ಜಿ ನಮೂನೆಯನ್ನು ಪಡೆಯಬಹುದು. ಅರ್ಜಿ ನಮೂನೆಯನ್ನು ಭರ್ತಿ ಮಾಡಿ, 2026ರ ಅಕ್ಟೋಬರ್ 30ರೊಳಗಾಗಿ ಸಂಬಂಧಪಟ್ಟ ಜಿಲ್ಲೆಯ ವ್ಯಾಪ್ತಿಗೆ ಬರುವ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಸಲ್ಲಿಸಬೇಕು.

ಜಿಲ್ಲಾವಾರು ಅರ್ಜಿ ಸಲ್ಲಿಸುವ ವಿಳಾಸಗಳು

ಬೀದರ, ಕಲಬುರಗಿ ಮತ್ತು ಯಾದಗಿರಿ: ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಹಳ್ಳದಕೇರಿ ಫಾರ್ಮ್, ಹೈದರಾಬಾದ್ ರಸ್ತೆ, ಬೀದರ?585403. ದೂರವಾಣಿ: 08482–225792.

– ಬಾಗಲಕೋಟೆ: ಡೀನ್, ತೋಟಗಾ–ರಿಕೆ ಮಹಾವಿದ್ಯಾಲಯ, ಉದ್ಯಾನಗಿರಿ, ಬಾಗಲಕೋಟೆ?587103. ದೂರವಾಣಿ: 08354–230601 / 230602.

– ವಿಜಯಪುರ: ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ತಿಡಗುಂದಿ?586119, ವಿಜಯಪುರ ಜಿಲ್ಲೆ.

– ಬೆಳಗಾವಿ: ಡೀನ್, ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ?591310, ಗೋಕಾಕ ತಾಲೂಕು. ದೂರವಾಣಿ: 08332–220701.

– ಧಾರವಾಡ ಮತ್ತು ಗದಗ: ಪ್ರಾದೇಶಿಕ ತೋಟಗಾ–ರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಪಿ.ಬಿ. ರಸ್ತೆ, ಕುಂಜಾವುರ, ಧಾರವಾಡ?580005. ದೂರವಾಣಿ: 0836–2000381. ಗದಗ ಜಿಲ್ಲೆಯ ರೈತರು ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯನ್ನು ಸಂಪರ್ಕಿಸಬಹುದು.

– ಹಾವೇರಿ: ಡಾ.ಸಿ.ಲಿಂ.ದೇ. ತೋಟಗಾ–ರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು?581110.

– ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ: ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಮುನಿರಾಬಾದ್?583233, ಕೊಪ್ಪಳ ಜಿಲ್ಲೆ. ದೂರವಾಣಿ: 08539–270453.

ರೈತರಿಗೆ ಮನವಿ

ತೋಟಗಾರಿಕೆಯಲ್ಲಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ಉತ್ತಮ ಸಾಧನೆ ಮಾಡಿರುವ ರೈತರು ಹಾಗೂ ರೈತ ಮಹಿಳೆಯರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವಂತೆ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ: "ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವೆಬ್‌ಸೈಟ್" (https://uhsbagalkot.karnataka.gov.in) ಸಂಪರ್ಕಿಸಬಹುದು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101